ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 262 RNI Number : KNKAN/25/A2770 05-10-2026 Monday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ:262 ರಾಯಚೂರು 05-10-2026 ಸೋಮವಾರ ಪುಟ 04 ಬೆಲೆ ರೂ.2/- ಮೊ:8660146563

ನಮೋಶಿ ಗೆಲುವಿಗೆ ಬಿಜೆಪಿ-ಜೆಡಿಎಸ್ ಜಂಟಿ ರಣತಂತ್ರ



ರಾಯಚೂರು, ಅ.4-

ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರ ಗೆಲುವಿಗಾಗಿ ಬಿಜೆಪಿ ಮತ್ತು ಜೆಡಿಎಸ್ ಒಳಗೊಂಡ ಎನ್‌ಡಿಎ ಮೈತ್ರಿಕೂಟ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಪಾಟೀಲ ಲೆಕ್ಕಿಹಾಳ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಕ್ಟೋಬರ್ 5ರಂದು ಕಲಬುರಗಿ ಯಲ್ಲಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ನಾಮಪತ್ರ ಸಲ್ಲಿಸಲಿದ್ದು, ಈ ಸಂದರ್ಭದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಭಾಗವಹಿಸ'ಲಿದ್ದಾರೆ ಎಂದರು.

ಸೆಪ್ಟೆಂಬರ್ 26ರಂದು ನಡೆದ ರಾಜ್ಯಮಟ್ಟದ ಎನ್‌ಡಿಎ ಸಮನ್ವಯ ಸಭೆಯಲ್ಲಿ ಚುನಾವಣಾ ಕಾರ್ಯ ತಂತ್ರ ರೂಪಿಸಲಾಗಿದೆ. ರಾಜ್ಯ ನಾಯಕರ ಸೂಚನೆಯಂತೆ ಎರಡೂ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಯಾವುದೇ ಭಿನ್ನಾಭಿಪ್ರಾಯವಿಲ್ಲದೆ ಜಂಟಿ ಯಾಗಿ ಪ್ರಚಾರ ನಡೆಸಲಿದ್ದಾರೆ. ರಾಯಚೂರು ಜಿಲ್ಲೆಯಲ್ಲಿಯೂ ಸಮನ್ವಯ ಸಮಿತಿ ರಚಿಸಿ ಚುನಾ ವಣಾ ಚಟುವಟಿಕೆಗಳನ್ನು ಚುರುಕುಗೊಳಿಸಲಾಗುವುದು ಎಂದು ಹೇಳಿದರು.

ಜಿಲ್ಲೆಯ ಶಾಸಕರು, ಮಾಜಿ ಶಾಸಕರು ಹಾಗೂ ಹಿರಿಯ ಮುಖಂಡರ ನೇತೃತ್ವದಲ್ಲಿ ಅಕ್ಟೋಬರ್ 11ರಂದು ರಾಯಚೂರಿನಲ್ಲಿ ಎನ್‌ಡಿ ಎ ಸಮನ್ವಯ ಸಮಿತಿ ಸಭೆ ನಡೆ ಯಲಿದೆ. ಚುನಾವಣಾ ಪ್ರಚಾರದ ಜವಾಬ್ದಾರಿಗಳನ್ನು ಹಂಚಿಕೆ ಮಾಡಿ ಮತದಾರರನ್ನು ತಲುಪಲು ಕ್ರಮ ಕೈಗೊಳ್ಳಲಾಗುವುದು. ಈಶಾನ್ಯ ಶಿಕ್ಷಕರ ಕ್ಷೇತ್ರ ಸೇರಿದಂತೆ ನಾಲ್ಕು ಕ್ಷೇತ್ರಗಳಲ್ಲಿ ಮೈತ್ರಿಕೂಟದ ಅಭ್ಯರ್ಥಿ ಗಳ ಗೆಲುವಿಗೆ ಎಲ್ಲರೂ ಶ್ರಮಿಸ ಬೇಕು ಎಂದು ತಿಳಿಸಿದರು.

ಶಶೀಲ್ ಜಿ. ನಮೋಶಿ ಅವರ ತಾಯಿ ನಿಧನರಾದ ಸುದ್ದಿ ತೀವ್ರ ದುಃಖ ತಂದಿದೆ. ಈ ಹಿನ್ನೆಲೆಯಲ್ಲಿ ಅವರು ನಾಮಪತ್ರ ಸಲ್ಲಿಕೆಯ ಕೊನೆಯ ದಿನಾಂಕದಂದು ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಹೇಳಿದರು.

ಜೆಡಿಎಸ್ ಜಿಲ್ಲಾಧ್ಯಕ್ಷ ವಿರೂಪಾಕ್ಷಿ ಮಾತನಾಡಿ, ರಾಜ್ಯ ಘಟಕದ ಅಧ್ಯಕ್ಷರು ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಸೂಚನೆಯಂತೆ ಜೆಡಿಎಸ್ ಮುಖಂಡರು ಮತ್ತು ಕಾರ್ಯಕರ್ತರು ಬಿಜೆಪಿ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಲಿದ್ದಾರೆ. ಮೈತ್ರಿಕೂಟದಲ್ಲಿ ಯಾವುದೇ ಗೊಂದಲವಿಲ್ಲದೆ ಒಗ್ಗಟ್ಟಿನಿಂದ ಕಾರ್ಯನಿರ್ವ ಹಿಸಲಾಗುವುದು ಎಂದರು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಾವು ಆಕಾಂಕ್ಷಿಯಾಗಿರುವುದಾಗಿಯೂ ತಿಳಿಸಿದರು.

ಈ ಸಂದರ್ಭದಲ್ಲಿ ಸೋಮಶೇಖರ, ರಾಮಕೃಷ್ಣ, ರವೀಂದ್ರ ಜಾಲ್ದಾರ್ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಉಪಸ್ಥಿತ ರಿದ್ದರು.

ನೂತನ ಅಧ್ಯಕ್ಷರ ಆಯ್ಕೆ ಅನಧಿಕೃತವೆಂಬ ಆರೋಪ ಸತ್ಯಕ್ಕೆ ದೂರ

ಅಧಿಕಾರಾವಧಿ ಪೂರ್ಣಗೊಂಡ ಬಳಿಕ ಸರ್ವಾನುಮತದಿಂದ ಆಯ್ಕೆ




ರಾಯಚೂರು, ಅ.4- ಮಡಿವಾಳ ಮಾಚಿದೇವ ಸಮಾಜದ ನೂತನ ಜಿಲ್ಲಾಧ್ಯಕ್ಷರಾಗಿ ಯು. ಆಂಜಿನೇಯ್ಯ ಹಾಗೂ ಗೌರವಾಧ್ಯಕ್ಷರಾಗಿ ಬಿ. ವಿರುಪಾಕ್ಷಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಈ ಆಯ್ಕೆಯನ್ನು ಅನಧಿಕೃತ ಎಂದು ಆರೋಪಿಸುವ ಮೂಲಕ ಹಿಂದಿನ ಅಧ್ಯಕ್ಷ ಜಂಬಣ್ಣ ಯಕ್ಲಾಸಪೂರ ಅವರು ಸಮಾಜದಲ್ಲಿ ಗೊಂದಲ ಸೃಷ್ಟಿಸುತ್ತಿರುವುದು ಸತ್ಯಕ್ಕೆ ದೂರವಾಗಿದೆ ಎಂದು ಸಮಾಜದ ಹಿರಿಯ ಮುಖಂಡ ಜಿ. ಶಿವಮೂರ್ತಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಂಬಣ್ಣ ಯಕ್ಲಾಸಪೂರ ಅವರು 2023ರ ಆಗಸ್ಟ್‌ನಲ್ಲಿ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಅವರ ಮೂರು ವರ್ಷದ ಅಧಿಕಾರಾವಧಿ 2026ರ ಆಗಸ್ಟ್‌ನಲ್ಲೇ ಪೂರ್ಣಗೊಂಡಿದೆ. ಇದಕ್ಕೆ ವಾರ್ಷಿಕ ಮಹಾಸಭೆಯ ನಿರ್ಣಯಗಳು, ಆಡಿಟ್ ವರದಿಗಳು ಹಾಗೂ ನೋಂದಣಾಧಿಕಾರಿಗಳಿಗೆ ಸಲ್ಲಿಸಿರುವ ದಾಖಲೆಗಳೇ ಸಾಕ್ಷಿಯಾಗಿವೆ ಎಂದರು.

ಅಧಿಕಾರಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಜಂಬಣ್ಣ ಯಕ್ಲಾಸಪೂರ ಅವರೇ ಸೆ.27ರಂದು ಸಮುದಾಯ ಭವನದಲ್ಲಿ ಸರ್ವಸದಸ್ಯರ ಸಭೆ ಕರೆದಿದ್ದರು. ಬಳಿಕ ಸೆ.29ರಂದು ಹಿರಿಯ ಮುಖಂಡರು ಹಾಗೂ ಸರ್ವಸದಸ್ಯರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಯು. ಆಂಜಿನೇಯ್ಯ ಅವರನ್ನು ಜಿಲ್ಲಾಧ್ಯಕ್ಷರಾಗಿ ಹಾಗೂ ಬಿ. ವಿರುಪಾಕ್ಷಿ ಅವರನ್ನು

3ನೇ ಪುಟ.....

ರಾಮ ಮಂದಿರದ ದೇಣಿಗೆ ಕಳ್ಳರ ಬಗ್ಗೆ ಮೋದಿ ಸರಕಾರಕ್ಕೆ ಮೃದು ಧೋರಣೆ ಯಾಕಿದೆ?: ಕಾಂಗ್ರೆಸ್ ಪ್ರಶ್ನೆ



ಹೊಸದಿಲ್ಲಿ,ಅ.4: ಅಯೋಧ್ಯೆಯ ರಾಮಮಂದಿರದ ದೇಣಿಗೆ ಕಳವು ಪ್ರಕರಣದ ತನಿಖೆಯಲ್ಲಿ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಇತರರನ್ನು ರಕ್ಷಿಸಲಾಗುತ್ತಿದೆ ಎಂದು ಕಾಂಗ್ರೆಸ್ ರವಿವಾರ ಆರೋಪಿಸಿದೆ. ಅಧಿಕಾರದ ಅಹಂಕಾರವು ಆತ್ಮಘಾತುಕ ಎಂದು ಹೇಳಿರುವ ಕಾಂಗ್ರೆಸ್, ಈ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಮೌನವನ್ನು ಪ್ರಶ್ನಿಸಿದೆ.

ಕಳ್ಳತನವಾದ ಹಣಕ್ಕೆ ಸಂಬಂಧಿಸಿದ ವೀಡಿಯೊ ಜೂನ್ 4ರಂದೇ ರಾಯ್‌ಗೆ ತಲುಪಿದ್ದರೂ, ಎಫ್‌ಐಆರ್ ದಾಖಲಿಸಲು 21 ದಿನಗಳ ವಿಳಂಬವೇಕಾಯಿತು ಎಂದೂ ಪ್ರಶ್ನಿಸಿದೆ.

ತನಿಖೆಯ ಮುಖ್ಯ ಉದ್ದೇಶ ಸಣ್ಣಪುಟ್ಟ ಕಳ್ಳರನ್ನು ಹಿಡಿಯುವುದಷ್ಟೇ ಆಗಿತ್ತೇ ಅಥವಾ ಯಾರ ಮೇಲ್ವಿಚಾರಣೆ ಮತ್ತು ಆಶ್ರಯದಲ್ಲಿ ಈ ಘಟನೆಗಳು ನಡೆದವೋ ಅವರ ಹೊಣೆಗಾರಿಕೆಯನ್ನು ನಿಗದಿಪಡಿಸುವುದೂ ಆಗಿತ್ತೇ? ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಎಕ್ಸ್ ಪೋಸ್ಟ್‌ನಲ್ಲಿ ಪ್ರಶ್ನಿಸಿದ್ದಾರೆ.

ಮೋದಿ ಸರಕಾರವು ರಾಮ ಮಂದಿರದ ದೇಣಿಗೆ ಕದ್ದ ಕಳ್ಳರ ಬಗ್ಗೆ ಇಷ್ಟೊಂದು ಮೃದು ಧೋರಣೆಯನ್ನೇಕೆ ತಳೆದಿದೆ? ಎಂದೂ ರಮೇಶ್ ಸರಣಿ ಪ್ರಶ್ನೆಗಳಲ್ಲಿ ಕೇಳಿದ್ದಾರೆ.

ಮೋದಿ ಸರಕಾರವು ಪ್ರತಿಪಕ್ಷಗಳ ನಾಯಕರ ವಿರುದ್ಧ ಈ.ಡಿ.ಮತ್ತು ಸಿಬಿಐನಂತಹ ಸಂಸ್ಥೆಗಳ ದುರ್ಬಳಕೆಗೆ ಹಿಂಜರಿಯುವುದಿಲ್ಲ. ಆದರೆ, ರಾಮಮಂದಿರದಲ್ಲಿ 105 ದೇಣಿಗೆ ಕಳವು ಘಟನೆಗಳು ನಡೆದಿರುವುದು ಸಿಸಿಟಿವಿ ದೃಶ್ಯಾವಳಿಗಳಿಂದ ತಿಳಿದು ಬಂದಿದ್ದರೂ, ತನಿಖೆಯು ಟ್ರಸ್ಟ್‌ನ ಆಡಳಿತದ ಜವಾಬ್ದಾರಿ ಹೊತ್ತ ಹಾಗೂ ಕಳ್ಳರನ್ನು ರಕ್ಷಿಸುತ್ತಿರುವ ಶಂಕಿತರನ್ನು ಏಕೆ ತಲುಪಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

105 ಕಳ್ಳತನ ಘಟನೆಗಳಲ್ಲಿ ಕೇವಲ 79.85 ಲಕ್ಷ ರೂಪಾಯಿಗಳನ್ನು ವಶಪಡಿಸಿಕೊಂಡ ಬಳಿಕ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸಲಾಗುತ್ತಿದೆಯೇ? ರಾಯ್ ಮತ್ತು ಮಿಶ್ರಾ ಅವರನ್ನು ಆರೋಪಿಗಳನ್ನಾಗಿ ಮಾಡುವ ಬದಲು ಸಾಕ್ಷಿಗಳನ್ನಾಗಿ ಏಕೆ ಪರಿಗಣಿಸಲಾಗಿದೆ ಎಂದು ರಮೇಶ್ ಕೇಳಿದ್ದಾರೆ.

ಜೂನ್‌ನಲ್ಲಿ ರಾಯ್ ಮತ್ತು ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರಾ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದರು.

ಜೂ.4ರಂದು ವೀಡಿಯೊ ರಾಯ್‌ಗೆ ತಲುಪಿತ್ತು, ಜೂ.5ರಂದು ಸಿಸಿಟಿವಿ ಫೂಟೇಜ್ ಪರಿಶೀಲಿಸಲಾಗಿತ್ತು ಮತ್ತು ಜೂ.25ರಂದು ಎಫ್‌ಐಆರ್ ದಾಖಲಾಗಿತ್ತು. ಈ 21 ದಿನಗಳ ವಿಳಂಬದ ಹಿಂದಿನ ಸತ್ಯವನ್ನು ದೇಶದ ಎದುರು ಏಕೆ ಬಹಿರಂಗಗೊಳಿಸಿಲ್ಲ ಎಂದು ಪ್ರಶ್ನಿಸಿರುವ ಜೈರಾಮ್ ರಮೇಶ್, ಉನ್ನತ ಮಟ್ಟದ ಶಾಮೀಲಾತಿ ಅಥವಾ ನಿರ್ಲಕ್ಷ್ಯವಿಲ್ಲದೆ ಇಷ್ಟೊಂದು ಕಳ್ಳತನಗಳು ನಡೆಯಲು ಹೇಗೆ ಸಾಧ್ಯ? 105 ಘಟನೆಗಳು ನಡೆದಿದ್ದರೂ ಕೇವಲ ಎಂಟು ಮಂದಿ ಮಾತ್ರ ಆರೋಪಿಗಳಾಗಿದ್ದು ಹೇಗೆ ಎಂದು ಪ್ರಶ್ನಿಸಿದ್ದಾರೆ.

ಸರ್ವೋಚ್ಚ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ಮತ್ತು ನಿಷ್ಪಕ್ಷ ತನಿಖೆಯು ಮಾತ್ರ ಸತ್ಯವನ್ನು ಬಹಿರಂಗಗೊಳಿಸಲು ಸಾಧ್ಯ. ಪ್ರಧಾನಿಯವರು ಈ ವಿಷಯದ ಕುರಿತು ಮೌನ ಮುರಿಯಬೇಕು, ಏಕೆಂದರೆ ಕಳ್ಳರನ್ನು ಅವರು ರಕ್ಷಿಸುತ್ತಿದ್ದಾರೆ ಎಂಬ ಭಾವನೆಯನ್ನು ಅವರ ಮೌನವು ಮೂಡಿಸುತ್ತಿದೆ ಎಂದು ಜೈರಾಮ್ ರಮೇಶ್ ಹೇಳಿದ್ದಾರೆ.

ರಾಯಚೂರು ವಿ.ವಿ.ಬೆಳವಣಿಗೆ ಸಹಿಸದ ಹೋರಾಟಗಾರ ನಡೆ ಖಂಡನೀಯ

ರಾಯಚೂರು,ಅ.4-

ರಾಯಚೂರು ವಿಶ್ವವಿದ್ಯಾಲಯದ ಬೆಳವಣಿಗೆ ಸಹಿಸದ ಹೋರಾಟಗಾರರ ನಡೆಯನ್ನು ಭಾರತೀಯ ಸೇವಾ ಸಮಿತಿ ಜಿಲ್ಲಾಧ್ಯಕ್ಷರಾದ ಡಾ. ಬಿ ತಿಮ್ಮಪ್ಪ ಅವರು ತೀವ್ರವಾಗಿ ಖಂಡಿಸಿದರು.



ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವು 1992 ರಂದು ಗುಲ್ಬರ್ಗ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವೆಂದು ಸ್ಥಾಪಿಸಲಾಯಿತು, 2020 ರಲ್ಲಿ ಕರ್ನಾಟಕ ಸರಕಾರವು ಈ ಕೇಂದ್ರವನ್ನು ರಾಯಚೂರು ವಿಶ್ವವಿದ್ಯಾಲಯವೆಂದು ಘೋಷಿಸಿತು 2025 ರಲ್ಲಿ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವೆಂದು ನಾಮಕರಣ ಮಾಡಲಾಯಿತು, ಈ ವಿಶ್ವವಿದ್ಯಾಲಯವು ಕೇವಲ 7 ವಿಭಾಗಗಳಿಂದ ಪ್ರಾರಂಭವಾಗಿ ಇಂದು 20 ವಿಭಾಗಗಳನ್ನು ಒಳಗೊಂಡಿದೆ ಪ್ರೊ. ಶಿವಾನಂದ ಕೆಳಗಿನಮನಿಯವರು ಕುಲಪತಿಗಳಾಗಿ ಜೂಲೈ -2025ರಂದು ಅಧಿಕಾರ ವಹಿಸಿಕೊಂಡಾಗ ವಿಶ್ವವಿದ್ಯಾಲ ಯವು ಅನೇಕ ಕೊರತೆಗಳಿಂದ ಕೂಡಿದ್ದು, ಹೊಸ ಕುಲಪತಿಗಳ ಆಗಮನದಿಂದ ಅವರ ದೂರದೃಷ್ಟಿ ಶಿಸ್ತು, ಶೈಕ್ಷಣಿಕ ಭದ್ರತೆ, ಆಡಳಿತಾತ್ಮಕ ಸುಧಾರಣೆಗಳಿಂದ ಸಾಕಷ್ಟು ಬದಲಾವಣೆಗ ಳನ್ನು ಕಂಡುಕೊಂಡಿದೆ ಜೊತೆಗೆ ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯಿಂದ ಕುಲಪತಿಗಳ ಮತ್ತು ಅವರ ಆಡಳಿತ ವರ್ಗದ ಪರಿಶ್ರಮದಿಂದ ಅನೇಕ ಶೈಕ್ಷಣಿಕ ಕಾರ್ಯ ಚಟುವಟಿಕೆಗಳು ರಸ್ತೆ, ಕಟ್ಟಡ ಕಾಮಗಾರಿ, ನೀರಿನ ವ್ಯವಸ್ಥೆ, ಹಾಸ್ಟೆಲ್, ಕ್ರೀಡಾಂಗಣ ಹೀಗೆ ಹತ್ತಾರು ಕೆಲಸಗಳು ತೀವ್ರಗತಿಯಲ್ಲಿ ನಡೆಯುತ್ತಿರುವುದು ಪ್ರತ್ಯಕ್ಷ ಸಾಕ್ಷಿಯಾಗಿದೆ . ಇನ್ನು ವಿಧ್ಯಾರ್ಥಿಗಳ ಹಿತದೃಷ್ಟಿಯಿಂದ ನಿರಂತರವಾಗಿ ಪಾಠ ಪ್ರವಚನಗಳು, ಸೆಮಿನಾರ್, ಕಾರ್ಯಾಗಾರ ವಿಶೇಷ ಉಪನ್ಯಾಸ ನಿರಂತರವಾಗಿ ನಡೆಯುತ್ತಿದೆ, ನಾಡಿನ ಅನೇಕ ವಿದ್ವಾಂಸರುಗಳು, ತಜ್ಞರು, ಸಾಹಿತಿಗಳ ಆಗಮನದಿಂದ ವಿದ್ಯಾ ರ್ಥಿಗಳಿಗೆ ವಿಶೇಷವಾದ ಜ್ಞಾನ ಶಿಸ್ತುಗಳು ಲಭ್ಯವಾಗುತ್ತಿದೆ .

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯವು ಶೈಕ್ಷಣಿಕ, ಸಾಹಿತ್ಯಕ, ಮತ್ತು ಕ್ರೀಡಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ, ಇಂತಹ ಅಭಿವೃದ್ಧಿಯನ್ನು ಸಹಿಸಿಕೊಳ್ಳದ ಕೆಲವು ಪಟ್ಟಭದ್ದ ಹಿತಾಸಕ್ತಿಗಳು ವಿಶ್ವವಿದ್ಯಾಲಯಕ್ಕೆ ಕಪ್ಪು ಮಸಿ ಬಳಿಯಲು ಹೊರಟಿವೆ ಅವರ ದುರುದ್ದೇಶ ಪೂರಿತವಾದ ಆಪಾದನೆಗಳು ನಿರಾಧಾರವಾಗಿವೆ. ಸುಮಾರು 6 ವರ್ಷಗಳ ಹಿಂದಿನ ದಾಖಲೆಗಳನ್ನು ಕೊಡಿ, ನೇಮಕಾತಿ ಹೊಂದಿದವರ ಸೇವಾ ವಿವರವನ್ನು ಕೊಡಿ, ಕಟ್ಟಡ ಕಾಮಗಾರಿಗಳ ಟೆಂಡರಗಳ ಬಗ್ಗೆ ಮಾಹಿತಿ ನೀಡಿ, ಏಜೆನ್ಸಿ ಹೊರಗುತ್ತಿಗೆದಾರರ ಸಂಬಳದ ವಿವರಕೊಡಿ ಹೀಗೆ ಈ ಮೇಲ್ಕಂಡ ಎಲ್ಲ ಮಾಹಿತಿಗಳು ರಾಜ್ಯ ಸರಕಾರದ ಜಾಲತಾಣದಲ್ಲಿ ಲಭ್ಯವಿದ್ದರೂ ದುರುದ್ದೇಶ ಪೂರ್ವಕವಾಗಿ ವಿಶ್ವವಿದ್ಯಾಲಯದ ಬೆಳವಣಿಗೆಯನ್ನು ಸಹಿಸಲಾರದೆ ಅಧಿಕಾರಿ ಗಳ ಆತ್ಮ ವಿಶ್ವಾಸವನ್ನೂ ಕುಗ್ಗಿಸು ವ ಹಾಗು ವ್ಯಕ್ತಿಗತ ತೇಜೋ ವಧೆಯನ್ನು ಮಾಡುತ್ತಿರುವುದು ಖಂಡನೀಯ ಹಿಗಿರುವಾಗ

3ನೇ ಪುಟ.....

ನೀರಾವರಿ ಸಮಸ್ಯೆ ಪರಿಹಾರಕ್ಕೆ ಅ.7 ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ -ಬಸನಗೌಡ ಬಾದರ್ಲಿ

ಸಿಂಧನೂರು,ಅ.04

ವಿಧಾನಪರಿಷತ್ ಶಾಸಕರಾದ ಬಸನಗೌಡ ಬಾದರ್ಲಿ ಅವರು ನೀರಾವರಿ ಸಮಸ್ಯೆ ಪರಿಹಾರಕ್ಕೆ ಅಕ್ಟೋಬರ್ 7ರಂದು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷರಲ್ಲಿ ಸಭೆ ನಡೆಯಲಿದೆ.

ಸರ್ಕಾರ ರೈತರ ಪರವಾಗಿದೆ ಯಾವುದೇ ತರಹದ ಆತಂಕ ಬೇಡ ಎಂದು ಬಸವನಗೌಡ ಬಾದರ್ಲಿ ಅವರು ಮಾಧ್ಯಮಗಳಿಗೆ ಪತ್ರಿಕಾ ಹೇಳಿಕೆ ಮುಖಾಂತರ ತಿಳಿಸಿದರು. ಅವರು. ಸಿಂಧನೂರು ತುಂಗಭದ್ರಾ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ರೈತರ ಹಿತ ಕಾಯಲು ಸರ್ಕಾರ ಬದ್ಧವಾಗಿದ್ದು. ಈ ನಿಟ್ಟಿನಲ್ಲಿ ನೀರಿನ ಸಮಸ್ಯೆ ಸರಿದೋಗಿಸುವ ಉದ್ದೇಶದಿಂದ ಅಕ್ಟೋಬರ್ 7ರಂದು ಜಿಲ್ಲಾ ಉಸ್ತುವಾರಿ ಸಚಿವ. ಡಾಕ್ಟರ್ ಅಜಯ್ ಸಿಂಗ್ ನೇತೃತ್ವದಲ್ಲಿ ಮುನಿರಾಬಾದ್ ನಲ್ಲಿ ಸಭೆ ಕರೆಯಲಾಗಿದೆ. ಎಂದು ಬಸನಗೌಡ ಬಾದರ್ಲಿ ಅವರು ತಿಳಿಸಿದರು.



ಸಿಂಧನೂರು ತಾಲೂಕಿನ ರೈತರಿಗೆ ನಿರಂತರ ನೀರು ಹರಿಸಲು ಕ್ರಮ ಕೈಗೊಳ್ಳಲಾಗಿದ್ದು. ತುಂಗಭದ್ರಾ ಎಡದಂಡೆ ಕಾಲುವೆಯ ಸಿಂಧನೂರು 36ನೇ ಉಪಕಾಲುವೆಗೆ ವಾರ ಬಂದಿ ಪದ್ಧತಿ ಜಾರಿಗೊಳಿಸಿದ ಜಿಲ್ಲಾಧಿಕಾರಿಗಳ ಆದೇಶವನ್ನು ರದ್ದುಗೊಳಿಸಿ ನಿರಂತರ ನೀರು ಹರಿಸುವಂತೆ ಮುಖ್ಯಮಂತ್ರಿಗಳೊಂದಿಗೆ ದೂರವಾಣಿ ಮೂಲಕ ಚರ್ಚಿಸಿ. ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಈ ವಿಚಾರವಾಗಿ ಜಿಲ್ಲಾ ಉಸ್ತುವಾರಿ ಸಚಿವರು. ನೀರಾವರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲಾದ ಬಳಿಕ 36ನೇ ಉಪಕಾಲುವೆ ಗೇಟ್ ಗಳನ್ನು ತೆರೆಯಲಾಗಿದ್ದು. ರೈತರ ಜಮೀನುಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ನೀರಿನ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸುವ ಕುರಿತು ಅಕ್ಟೋಬರ್ 7 ರಂದು ಸಂಜೆ 4:00 ಮುನಿರಾಬಾದ್ ನಲ್ಲಿ ಸಭೆ ಕರೆಯಲಾಗಿದೆ. ಸಭೆಯಲ್ಲಿ ಈ ಭಾಗದ ರೈತರ ಹಿತಾಸಕ್ತಿಯ ಅನುಗುಣವಾಗಿ ನಿರ್ಣಯ ಕೈಗೊಳ್ಳಲಾಗುವುದು. ಸಿಂಧನೂರು ತಾಲೂಕಿನ ರೈತರಿಗೆ ಸಮರ್ಪಕ ನೀರು ಒದಗಿಸುವುದು ನಮ್ಮ ಸರಕಾರದ ಆದ್ಯತೆಯಾಗಿದೆ ಎಂದು ಮತ್ತೊಮ್ಮೆ ಖಚಿತ ಪಡಿಸುತ್ತೇನೆ ಎಂದು ತಿಳಿಸಿದರು.

ಉಪಕಾಲುವೆಗೆ ನೀರು ಸ್ಥಗಿತ: ಜಿಲ್ಲಾಡಳಿತದ ವಿರುದ್ಧ ರೈತರ ಪ್ರತಿಭಟನೆ

ಸಿಂಧನೂರು: ತುಂಗಭದ್ರಾ ಎಡದಂಡೆ ನಾಲೆಯ ಸಿಂಧನೂರು ತಾಲೂಕು ವ್ಯಾಪ್ತಿಯ 36ನೇ ಉಪಕಾಲುವೆಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ವಿರುದ್ಧ ರೈತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೀರು ಹರಿಸುವಂತೆ ಆಗ್ರಹಿಸಿ ನಗರದ ಗಾಂಧಿ ವೃತ್ತದಲ್ಲಿ ಮುಖ್ಯ ಹೆದ್ದಾರಿ ತಡೆದು ಸಾವಿರಾರು ರೈತರು ಪಕ್ಷಾತೀತವಾಗಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.



ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಲಿಂಗಸುಗೂರು ಸಹಾಯಕ ಆಯುಕ್ತರ ನೇತೃತ್ವದಲ್ಲಿ ಶುಕ್ರವಾರ ತಡರಾತ್ರಿಯಿಂದಲೇ 36ನೇ ಉಪಕಾಲುವೆಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಗಿದೆ. ಅಲ್ಲದೆ, ಎಡದಂಡೆ ಮುಖ್ಯ ಕಾಲುವೆ ವ್ಯಾಪ್ತಿಯಲ್ಲಿ 144ನೇ ಸೆಕ್ಷನ್ ಜಾರಿಗೊಳಿಸಿ, ಪೊಲೀಸ್ ಬಿಗಿ ಬಂದೋಬಸ್ತ್ ಕಲ್ಪಿಸಲಾಗಿದೆ.

ಈ ಹಿಂದೆ ಜಿಲ್ಲಾಧಿಕಾರಿಗಳ ಆದೇಶವನ್ನು ವಿರೋಧಿಸಿ ಶಾಸಕರು, ಮಾಜಿ ಸಂಸದರು ಹಾಗೂ ಮಾಜಿ ಸಚಿವರು ರೈತರೊಂದಿಗೆ ಕಾಲುವೆ ಬಳಿ ಹೋರಾಟ ನಡೆಸಿ, ನೀರು ಸ್ಥಗಿತಗೊಳಿಸದಂತೆ ಆಗ್ರಹಿಸಿದ್ದರು. ಇದೀಗ ಏಕಾಏಕಿ ಶುಕ್ರವಾರ ತಡರಾತ್ರಿ ಕಾಲುವೆಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಿರುವುದರಿಂದ ರೈತರು ಜಿಲ್ಲಾಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ನೀರು ಸ್ಥಗಿತಗೊಳಿಸಿರುವುದನ್ನು ವಿರೋಧಿಸಿ ಶನಿವಾರ ನಗರದ ಗಾಂಧಿ ವೃತ್ತದಲ್ಲಿ ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ, ಮಾಜಿ ಸಚಿವ ವೆಂಕಟರಾವ್ ನಾಡಗೌಡ ಹಾಗೂ ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಪಂಪನಗೌಡ ಬಾದರ್ಲಿ ನೇತೃತ್ವದಲ್ಲಿ ಸಾವಿರಾರು ರೈತರು ಪ್ರತಿಭಟನೆ ನಡೆಸಲು ಮುಂದಾದರು. ಕಾಲುವೆಗೆ ನೀರು ಹರಿಸುವಂತೆ ಆಗ್ರಹಿಸಿದ ಪ್ರತಿಭಟನಾಕಾರರು ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಗಂಗಾವತಿ, ಕುಷ್ಟಗಿ ಹಾಗೂ ರಾಯಚೂರು ಮುಖ್ಯರಸ್ತೆಗಳಲ್ಲಿ ರಸ್ತೆ ತಡೆ ನಡೆಸಿದ್ದರಿಂದ ಸಂಚಾರಕ್ಕೆ ಅಡಚಣೆ ಉಂಟಾಗಿ ಪ್ರಯಾಣಿಕರು ಪರದಾಡುವಂತಾಯಿತು.

ಘಟನೆಯ ಹಿನ್ನೆಲೆಯಲ್ಲಿ ಶನಿವಾರ ತಾಲೂಕಿನ 36ನೇ ವ್ಯಾಪ್ತಿಯ ಕಾಲುವೆ ಬಳಿ ಸುಡಾ ಅಧ್ಯಕ್ಷ ಬಾಬುಗೌಡ ಬಾದರ್ಲಿ ನೇತೃತ್ವದಲ್ಲಿ ನೂರಾರು ರೈತರು ಕಾಲುವೆ ಬಂದ್ ಮಾಡಿರುವುದನ್ನು ತೆರವುಗೊಳಿಸಲು ಮುಂದಾದಾಗ, ಪ್ರತಿಭಟನಾನಿರತ ರೈತರನ್ನು ಪೊಲೀಸರು ಬಂಧಿಸಿ ತುರ್ವಿಹಾಳ ಠಾಣೆಗೆ ಕರೆದೊಯ್ದರು.

ಸ್ಥಳದಲ್ಲಿದ್ದ ಲಿಂಗಸುಗೂರು ಸಹಾಯಕ ಆಯುಕ್ತರು ಹಾಗೂ ರೈತ ಮುಖಂಡರ ನಡುವೆ ಮಾತಿನ ಚಕಮಕಿ ನಡೆದಿದ್ದು, ಕೆಲಕಾಲ ಪರಿಸ್ಥಿತಿ ಉದ್ವಿಗ್ನಗೊಂಡಿತು.

ಜಿಲ್ಲಾಧಿಕಾರಿಗಳ ಆದೇಶದ ಹಿನ್ನೆಲೆಯಲ್ಲಿ ಉಪಕಾಲುವೆಗೆ ನೀರು ಹರಿಸುವುದನ್ನು ಸ್ಥಗಿತಗೊಳಿಸಲಾಗಿದ್ದು, ಲಿಂಗಸುಗೂರು ಸಹಾಯಕ ಆಯುಕ್ತ ಹಾಗೂ ಡಿವೈಎಸ್‌ಪಿ ಚಂದ್ರಶೇಖರ ನೇತೃತ್ವದಲ್ಲಿ ಎಡದಂಡೆ ನಾಲೆ ವ್ಯಾಪ್ತಿಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ.

ಸಿಪಿಐ, ಪಿಎಸ್‌ಐ ಸೇರಿದಂತೆ 100ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದ್ದು, ಪ್ರದೇಶದಲ್ಲಿ ಬೂದಿಮುಚ್ಚಿದ ಕೆಂಡದಂತಿರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಯೋಜನಾ ವಿಭಾಗದ ಇಇಗೆ ಕುಡಿಯುವ ನೀರು ವಿಭಾಗದ ಹೆಚ್ಚುವರಿ ಹೊಣೆ ಆರೋಪ : ಸಿಇಒ ವಿರುದ್ಧ ದೂರು

ರಾಯಚೂರು: ರಾಯಚೂರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರ ಹೆಚ್ಚುವರಿ ಪ್ರಭಾರವನ್ನು ಯೋಜನಾ ವಿಭಾಗದ (ಪಿಎಂಜಿಎಸ್‌ಐ) ಕಾರ್ಯಪಾಲಕ ಅಭಿಯಂತರರಿಗೆ ನಿಯಮಬಾಹಿರವಾಗಿ ಜಿಲ್ಲಾ ಪಂಚಾಯತ್ ಸಿಇಒ ಅವರು ವಹಿಸಿದ್ದಾರೆ ಎಂದು ದೂರು ನೀಡಲಾಗಿದೆ.

ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರ ಹುದ್ದೆಯ ಹೆಚ್ಚುವರಿ ಪ್ರಭಾರವನ್ನು ಯೋಜನಾ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಮೇನಕಾ ಪಾಟೀಲ ಅವರಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಾಂದೂ ಅವರು ಸೆ.18ರಂದು ವಹಿಸಿಕೊಂಡು ಕಾರ್ಯನಿರ್ವಹಿಸುವಂತೆ ಆದೇಶ ಹೊರಡಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಆದರೆ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ (ಕೆಆರ್‌ಆರ್‌ಡಿಎ) ಅಧೀನದ ಯೋಜನಾ ವಿಭಾಗದ ಕಲ್ಯಾಣ ಕರ್ನಾಟಕ ಪಥ, ಕೆಕೆಆರ್‌ಡಿಬಿ, ಎಸ್‌ಡಿಪಿ ಸೇರಿದಂತೆ ವಿವಿಧ ಕಾಮಗಾರಿಗಳ ಭೌತಿಕ ಹಾಗೂ ಆರ್ಥಿಕ ಪ್ರಗತಿ ಮತ್ತು ಆಡಳಿತಾತ್ಮಕ ಕಾರ್ಯಗಳಿಗೆ ಇದರಿಂದ ನೇರ ಅಡಚಣೆಯಾಗಲಿದೆ ಎಂದು ದಲಿತ ಸೇನೆಯ ಜಿಲ್ಲಾಧ್ಯಕ್ಷ ಮಾರುತಿ ಕಮ್ರೋಳ್ ಬೆಂಗಳೂರಿನ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿಗಳಿಗೆ ದೂರು ನೀಡಿದ್ದಾರೆ.

ಕೆಕೆಆರ್‌ಡಿಎ ಯೋಜನಾ ವಿಭಾಗವು ರಾಜ್ಯಮಟ್ಟದ ಸೊಸೈಟಿಯಾಗಿದ್ದು, ಇದರ ಆಡಳಿತಾತ್ಮಕ ನಿಯಂತ್ರಣ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುತ್ತದೆ. ಆದರೆ ರಾಯಚೂರು ಜಿ.ಪಂ. ಸಿಇಒ ಅವರು ಯೋಜನಾ ವಿಭಾಗದಲ್ಲಿ ಹಸ್ತಕ್ಷೇಪ ಹಾಗೂ ನಿಯಂತ್ರಣ ಸಾಧಿಸಲು ಮುಂದಾಗಿರುವುದು ನಿಯಮಬಾಹಿರವಾಗಿದೆ ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.

ಕೆಕೆಆರ್‌ಡಿಎ ಯೋಜನಾ ವಿಭಾಗದ ಅಧಿಕಾರಿಗಳಿಗೆ ಇಲಾಖೆಯೇತರ ಹೆಚ್ಚುವರಿ ಪ್ರಭಾರ

3ನೇ ಪುಟ.....

ಯುವಜನರು ಸ್ವಯಂಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗಲಿ



ಕಲಬುರಗಿ,ಅ.04-

ಯುವಜನರು ಸ್ವಯಂಪ್ರೇರಿತರಾಗಿ ರಕ್ತದಾನದಲ್ಲಿ ಪಾಲ್ಗೊಂಡು ಅಗತ್ಯವಿರುವವರಿಗೆ ನೆರವಾಗುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸಲು ಮುಂದಾಗಬೇಕು ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಕರೆ ನೀಡಿದರು.

ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಹಾಗೂ ಕಲಬುರಗಿಯ ಇಎಸ್‌ಐ ಆಸ್ಪತ್ರೆಯ ಸಹಯೋಗದಲ್ಲಿ ರಾಷ್ಟ್ರೀಯ ರಕ್ತದಾನ ದಿನದ ಅಂಗವಾಗಿ ವಿಶ್ವವಿದ್ಯಾಲಯದ ವಿವಿಧೋದ್ದೇಶ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶೇಷ ರಕ್ತದಾನ ಶಿಬಿರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಕ್ತದಾನವು ಕೇವಲ ಮಾನವೀಯ ಸೇವೆಯಲ್ಲ, ಮತ್ತೊಬ್ಬರ ಜೀವ ಉಳಿಸುವ ಮಹತ್ವದ ಕಾರ್ಯವಾಗಿದೆ. ವಿದ್ಯಾರ್ಥಿಗಳು ಹಾಗೂ ಯುವಜನರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಸಮಾಜಕ್ಕೆ ತಮ್ಮ ಅಮೂಲ್ಯ ಕೊಡುಗೆ ನೀಡಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಇಎಸ್‌ಐ ಆಸ್ಪತ್ರೆಯ ರೋಗಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಅಬ್ದುಲ್ ಹಕೀಂ ಅತ್ತಾರ ಮಾತನಾಡಿ, ಒಂದು ಯೂನಿಟ್ ರಕ್ತವನ್ನು ದಾನ ಮಾಡುವುದರಿಂದ ಅದರ ವಿವಿಧ ಘಟಕಗಳನ್ನು ಬೇರ್ಪಡಿಸಿ ಮೂವರು ರೋಗಿಗಳಿಗೆ ನೆರವಾಗಲು ಸಾಧ್ಯವಿದೆ. ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಅಭಿಯಾನದಲ್ಲಿ ಪಾಲ್ಗೊಳ್ಳಬೇಕು ಎಂದು ಮನವಿ ಮಾಡಿದರು.

ಸಿಯುಕೆ ಕುಲಸಚಿವ ಪ್ರೊ. ಆರ್.ಆರ್. ಬಿರಾದಾರ್ ಮಾತನಾಡಿ, ದೇಶದಲ್ಲಿ ಪ್ರತಿವರ್ಷ ಸುಮಾರು 15 ಮಿಲಿಯನ್ ಯೂನಿಟ್ ರಕ್ತದ ಅಗತ್ಯವಿದ್ದು, ಪ್ರಸ್ತುತ ಸುಮಾರು 12 ಮಿಲಿಯನ್ ಯೂನಿಟ್‌ಗಳಷ್ಟು ರಕ್ತ ಸಂಗ್ರಹವಾಗುತ್ತಿದೆ. ಅಗತ್ಯ ಮತ್ತು ಲಭ್ಯತೆಯ ನಡುವಿನ ಅಂತರವನ್ನು ಕಡಿಮೆ ಮಾಡಲು ಹೆಚ್ಚಿನ ಪ್ರಮಾಣದಲ್ಲಿ ರಕ್ತ ಸಂಗ್ರಹಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ರಕ್ತದಾನ ಮಾಡುವುದರಿಂದ ಅಗತ್ಯವಿರುವ ರೋಗಿಗಳಿಗೆ ನೆರವಾಗುವುದರ ಜೊತೆಗೆ ಅಮೂಲ್ಯ ಜೀವಗಳನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಿಯುಕೆ ಕಾರ್ಯಕಾರಿ ಸಮಿತಿ ಸದಸ್ಯ ಡಾ. ರಘು ಅಕಮಂಚಿ ಅತಿಥಿಯಾಗಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಕುಲಪತಿ ಸೇರಿದಂತೆ ವಿದ್ಯಾರ್ಥಿಗಳು ರಕ್ತದಾನ ಮಾಡುವ ಕುರಿತು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಬಳಿಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಕಾರ್ಯಕ್ರಮದ ಸಂಯೋಜಕ ಡಾ. ಡಿ. ರಂಗನಾಥ ಸ್ವಾಗತಿಸಿದರು. ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರದ ವೈದ್ಯ ಡಾ. ರೋಹಿತ್ ಕುಮಾರ್ ವಂದನಾರ್ಪಣೆ ಮಾಡಿದರು.

ಪ್ರೊ. ಆರ್.ಎಸ್. ಹೆಗಡಿ, ಡಾ. ಬುಚಿರೆಡ್ಡಿ, ಸಹಾಯಕ ಕುಲಸಚಿವ ಸುನೀಲ್ ಜಿ., ಡಾ. ಚರಣ್ ಕುಮಾರ್ ಶಿವಕುಮಾರ್ ಸಿರಿಗೇರಿ, ಇಎಸ್‌ಐ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ನಗರದ ಸೌಂದರ್ಯದ ಶ್ರೇಯಸ್ಸು ಸ್ವಚ್ಛತಾ ರಾಯಭಾರಿಗಳಿಗೆ ಸಲ್ಲಬೇಕು : ಶಿವರಾಜ್ ರಾಠೋಡ್

ಬೀದರ್,ಅ.04-

ನಗರದ ನೈರ್ಮಲ್ಯ ಮತ್ತು ಸೌಂದರ್ಯದ ಶ್ರೇಯಸ್ಸು ಎಲ್ಲ ಸ್ವಚ್ಛತಾ ರಾಯಭಾರಿಗಳಿಗೆ ಸಲ್ಲಬೇಕು ಎಂದು ಜೋನಲ್ ಕಮಿಷನರ್ ಶಿವರಾಜ್ ರಾಠೋಡ್ ಹೇಳಿದರು.

ನಗರದ ಗುಂಪಾ ಕಾಲೋನಿಯಲ್ಲಿ ಮಹಾನಗರ ಪಾಲಿಕೆ ವತಿಯಿಂದ ಸ್ವಚ್ಛತಾ ಹಿ ಸೇವಾ ಅಭಿಯಾನದ ಭಾಗವಾಗಿ ಏಕ್ ಪೇಡ್ ಮಾ ಕೆ ನಾಮ್ ಸಸಿ ನೆಡುವ ವಿಶೇಷ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಗರವು ಹಸಿರಿನಿಂದ ಕೂಡಿದ್ದರೆ ಶುದ್ಧ ಗಾಳಿ ದೊರೆಯುವುದರ ಜೊತೆಗೆ ಸುಂದರವಾಗಿ ಹಾಗೂ ಆಕರ್ಷಕವಾಗಿ ಕಂಗೊಳಿಸುತ್ತದೆ. ನಗರವನ್ನು ಸ್ವಚ್ಛವಾಗಿಡಲು ಕಮ್ಯುನಿಟಿ ಮೊಬೈಲೈಜರ್‌ಗಳು ಮುಂಜಾನೆಯಿಂದ ರಾತ್ರಿವರೆಗೂ ಅವಿರತವಾಗಿ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಮೀನಾಕುಮಾರಿ ಮಾತನಾಡಿ, ಪರಿಸರ ರಕ್ಷಣೆ ಹಾಗೂ ನಗರದ ಶುಚಿತ್ವ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಕ ಗಿರೀಶ್, ನಾಗೇಶ್ ಸಪಾಟೆ, ಮೀನಾಕುಮಾರಿ, ಕಮ್ಯುನಿಟಿ ಮೊಬೈಲೈಜರ್‌ಗಳಾದ ಬೇಬಿ ರಾಣಿ, ಪೂರ್ಣಿಮಾ, ಸುಧಾ, ಜ್ಯೋತಿ ಮಡಿವಾಳ್, ಪ್ರೀತಿ, ಜೈಶ್ರೀ, ಮುನ್ನಮ್ಮ, ಲಕ್ಷ್ಮಿ, ಆಶಾರಾಣಿ, ಮೀನಾಕ್ಷಿ, ವೈಷ್ಣವಿ ಹಾಗೂ ಚಂದನ ಸೇರಿದಂತೆ ಮಹಾನಗರ ಪಾಲಿಕೆಯ ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.



ಬಾಗಲಕೋಟೆ: ಖಾಸಗಿ ಆಸ್ಪತ್ರೆಯಲ್ಲಿ ಮಹಿಳೆ ಸಾವು; ವೈದ್ಯರ ನಿರ್ಲಕ್ಷ್ಯ ಆರೋಪ

ಬಾಗಲಕೋಟೆ,ಅ,04-

ಖಾಸಗಿ ಆಸ್ಪತ್ರೆಯೊಂದರಲ್ಲಿ ಸೂಕ್ತ ಚಿಕಿತ್ಸೆ ದೊರೆಯದೆ 29 ವರ್ಷದ ಮಹಿಳೆ ಮೃತಪಟ್ಟಿರುವ ಬಗ್ಗೆ ವರದಿಯಾಗಿದೆ.

ಮೃತ ಮಹಿಳೆಯನ್ನು ಶಿಲ್ಪಾ ಭಂಜತ್ರಿ ಎಂದು ಗುರುತಿಸಲಾಗಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ರಕ್ತದ ಪ್ರಮಾಣ ಕಡಿಮೆಯಾಗಿದೆ ಎಂದು ತಿಳಿಸಿ ರಕ್ತ ನೀಡಲಾಗಿದೆ. ಆದರೆ ರಕ್ತದ ಮಾದರಿಯನ್ನು ಸರಿಯಾಗಿ ಪರಿಶೀಲಿಸದೆ ಹಾಗೂ ಹೊಂದಾಣಿಕೆ ಮಾಡದೆ ರಕ್ತ ನೀಡಲಾಗಿದೆ. ರಕ್ತ ನೀಡಿದ ಬಳಿಕ ಶಿಲ್ಪಾ ಅವರ ಆರೋಗ್ಯದಲ್ಲಿ ಏರುಪೇರಾಗಿದ್ದು, ನಂತರ ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ದೊರೆಯದೆ ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಮೃತರ ಪತಿ ಜಗದೀಶ ಭಂಜತ್ರಿ ಹಾಗೂ ಕುಟುಂಬಸ್ಥರು ''ಇದು ಸಹಜ ಸಾವು ಅಲ್ಲ, ವೈದ್ಯರ ನಿರ್ಲಕ್ಷ್ಯದಿಂದ ಸಂಭವಿಸಿದ ಸಾವು'' ಎಂದು ಆರೋಪಿಸಿದ್ದು, ಈ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಂಡು ಕುಟುಂಬಕ್ಕೆ ನ್ಯಾಯ ಒದಗಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ವೈದ್ಯ ಪ್ರಮೋದ್ ಮಿರ್ಜಾ ಅವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಕುಟುಂಬಸ್ಥರು ತಮ್ಮ ಮನವಿಗೆ ಸೂಕ್ತ ಸ್ಪಂದನೆ ದೊರೆಯದಿದ್ದರೆ ಆಸ್ಪತ್ರೆ ಎದುರು ಧರಣಿ ಸತ್ಯಾಗ್ರಹ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಗಾಣಗಾಪುರದಲ್ಲಿ ಸ್ವಚ್ಛತಾ ಅಭಿಯಾನ: 800 ಕೆ.ಜಿ. ತ್ಯಾಜ್ಯ ಸಂಗ್ರಹ

ಕಲಬುರಗಿ,ಅ.04-

ಗಾಂಧಿ ಜಯಂತಿ ಅಂಗವಾಗಿ ಸ್ವಚ್ಛ ಭಾರತ ಅಭಿಯಾನದಡಿ ಅಫಜಲಪುರ ತಾಲೂಕಿನ ಸುಕ್ಷೇತ್ರ ದೇವಲಗಾಣಗಾಪುರದಲ್ಲಿ ಶುಕ್ರವಾರ ಸತ್ಸಂಗ್ ಫೌಂಡೇಶನ್‌ನ ಸ್ವಯಂಸೇವಕರ ತಂಡವು ಸ್ಥಳೀಯ ದೇವಸ್ಥಾನದ ಸ್ವಚ್ಛತಾ ಸಿಬ್ಬಂದಿಯೊಂದಿಗೆ ಸೇರಿ ನರಸಿಂಹ ತೀರ್ಥ ಪ್ರದೇಶದಲ್ಲಿ ಸ್ವಚ್ಛತಾ ಕಾರ್ಯ ನಡೆಸಿತು.

ಸ್ವಚ್ಛತಾ ಕಾರ್ಯಕ್ಕೆ ಸ್ಥಳೀಯ ಯತಿರಾಜ ಪ್ರಾಥಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳೂ ಕೈಜೋಡಿಸಿದ್ದು, ನರಸಿಂಹ ತೀರ್ಥ ಪ್ರದೇಶದಿಂದ ಸುಮಾರು 700ರಿಂದ 800 ಕೆ.ಜಿ. ಘನ ತ್ಯಾಜ್ಯವನ್ನು ಸಂಗ್ರಹಿಸಲಾಯಿತು.



ಸತ್ಸಂಗ್ ಫೌಂಡೇಶನ್ ಹಾಗೂ ಗಾಣಗಾಪುರ ದತ್ತಾತ್ರೇಯ ದೇವಸ್ಥಾನ ಆಡಳಿತ ಮಂಡಳಿ ಸಹಯೋಗದಲ್ಲಿ ನಡೆದ ಪರಿಸರ ಜಾಗೃತಿ ಮತ್ತು ಸ್ವಚ್ಛತಾ ಅಭಿಯಾನವನ್ನು ಕಲಬುರಗಿ ಉಪವಿಭಾಗದ ಸಹಾಯಕ ಆಯುಕ್ತೆ ರಿತಿಕಾ ವರ್ಮಾ ಉದ್ಘಾಟಿಸಿ ಮಾತನಾಡಿದರು.


ಪ್ರದೇಶದ ಸ್ವಚ್ಛತೆ ಆ ನೆಲದ ಭವ್ಯತೆಯನ್ನು ಸಾರುತ್ತದೆ. ಹೀಗಾಗಿ ಮಕ್ಕಳು, ಯುವಜನರು ಹಾಗೂ ಸಮುದಾಯದ ಜನರಲ್ಲಿ ಪರಿಸರದ ಜವಾಬ್ದಾರಿ, ಸ್ವಚ್ಛತೆ ಮತ್ತು ಸಮಾಜಸೇವೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.

ಗಾಣಗಾಪುರ ಸಂಗಮ ಕ್ಷೇತ್ರದ ಪಾವಿತ್ರ್ಯತೆ ಹೆಚ್ಚಿಸಲು ನದಿ ಪಾತ್ರದಲ್ಲಿ ಕಡ್ಡಾಯವಾಗಿ ಸ್ವಚ್ಛತಾ ಕ್ರಮಗಳನ್ನು ಅನುಸರಿಸಬೇಕು. ಸತ್ಸಂಗ್ ಫೌಂಡೇಶನ್‌ನ ಹಿಮಾಲಯನ್ ಗುರುಗಳು ಹಾಗೂ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಪೂಜ್ಯ ಶ್ರೀ ಎಂ. ಅವರು ತಮ್ಮ ಸತ್ಸಂಗಿಗಳ ಶಿಷ್ಯ ಬಳಗಕ್ಕೆ ಇಂತಹ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳಲು ಪ್ರೇರಣೆಯಾಗಿದ್ದಾರೆ. ಸತ್ಸಂಗ್ ಫೌಂಡೇಶನ್‌ನ ಸಮಾಜಮುಖಿ ಕಾರ್ಯಗಳು ಮಾದರಿಯಾಗಿವೆ ಎಂದು ರಿತಿಕಾ ವರ್ಮಾ ಶ್ಲಾಘಿಸಿದರು.

ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬ ನಾಗರಿಕ ಹಾಗೂ ವಿದ್ಯಾರ್ಥಿಯ ಕರ್ತವ್ಯವಾಗಿದೆ. ವಿದ್ಯಾರ್ಥಿಗಳು ತಮ್ಮ ಮನೆಗಳಲ್ಲಿ ಶೌಚಾಲಯವಿದೆಯೇ ಹಾಗೂ ಅದನ್ನು ಬಳಸುತ್ತಿದ್ದಾರೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. ಮುಕ್ತ ಬಹಿರ್ದೆಸೆಗೆ ತೆರಳದೆ ಶೌಚಾಲಯವನ್ನೇ ಬಳಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯವಿದ್ದರೂ ಅದನ್ನು ಬಳಸದೆ ಇರುವುದು ಅನಾರೋಗ್ಯಕ್ಕೆ ಎಡೆಮಾಡಿಕೊಡುತ್ತದೆ. ಉತ್ತಮ ಆರೋಗ್ಯಕ್ಕಾಗಿ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ವಿದ್ಯಾರ್ಥಿ ಸಮುದಾಯಕ್ಕೆ ಕರೆ ನೀಡಿದರು.

ಗಾಣಗಾಪುರ ದೇವಸ್ಥಾನದ ನೋಡಲ್ ಅಧಿಕಾರಿಯಾಗಿರುವ ಐಎಎಸ್ ಪ್ರೊಬೇಷನರಿ ಅಧಿಕಾರಿ ಶಿಖರ್ ಮೊಘಾ ಮಾತನಾಡಿ, ವಿದ್ಯಾರ್ಥಿಗಳು ಶ್ರಮದಾನದ ಮೂಲಕ ಕೈಗೊಂಡ ಸ್ವಚ್ಛತಾ ಕಾರ್ಯವನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ತ್ಯಾಜ್ಯವನ್ನು ಮೂಲದಲ್ಲಿಯೇ ವಿಂಗಡಿಸುವುದು ಹಾಗೂ ಜೈವಿಕವಾಗಿ ವಿಘಟಿಸಬಹುದಾದ ಉತ್ಪನ್ನಗಳನ್ನು ಬಳಸುವ ಅಗತ್ಯವಿದೆ ಎಂದು ಒತ್ತಿ ಹೇಳಿದರು. ಸ್ವಚ್ಛತಾ ಶ್ರಮದಾನ ಕಾರ್ಯದಲ್ಲಿ ಸತ್ಸಂಗ್ ಫೌಂಡೇಶನ್‌ನ ಸ್ವಯಂಸೇವಕರು, ಗಾಣಗಾಪುರ ಪಿಡಿಒ ಅನುಸೂಯಾ, ದೇವಸ್ಥಾನದ ಸ್ವಚ್ಛತಾ ಸಿಬ್ಬಂದಿ, ಯತಿರಾಜ ಶಾಲೆಯ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ವಾರದೊಳಗೆ ಹೊಸ ಕೊಳವೆ ಬಾವಿ ಕೊರೆಸಿ ನೀರಿನ ಸಮಸ್ಯೆ ಬಗೆಹರಿಸಲು ಸಿಇಒ ಸೂಚನೆ



ಬೀದರ್,ಅ,04-

ಭಾಲ್ಕಿ ತಾಲೂಕಿನ ಬೀರಿ (ಕೆ) ಗ್ರಾಮದಲ್ಲಿ ಅಗತ್ಯವಿರುವ ಕಡೆ ವಾರದೊಳಗೆ ಹೊಸ ಕೊಳವೆ ಬಾವಿಗಳನ್ನು ಕೊರೆಸಿ ಗ್ರಾಮದ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ್ ವಿಠ್ಠಲರಾವ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಳಗ್ಗೆಯ ನಡೆಹಳ್ಳಿ ಕಡೆ ಅಭಿಯಾನದ ಅಂಗವಾಗಿ ಶನಿವಾರ ಭಾಲ್ಕಿ ತಾಲೂಕಿನ ಬಿರಿ (ಕೆ) ಗ್ರಾಮದಲ್ಲಿ ಗ್ರಾಮ ಸಂಚಾರ ಕೈಗೊಂಡ ಅವರು, ಗ್ರಾಮದ ಪ್ರತಿಯೊಂದು ಓಣಿಯಲ್ಲಿ ಸಂಚರಿಸಿ ಕುಡಿಯುವ ನೀರು ಹಾಗೂ ದೈನಂದಿನ ಗೃಹ ಬಳಕೆಗೆ ಅಗತ್ಯವಿರುವ ನೀರಿನ ಸಮಸ್ಯೆಯನ್ನು ಪರಿಶೀಲಿಸಿದರು.

ಬಳಿಕ ಗ್ರಾಮದ ದೇವಸ್ಥಾನದ ಆವರಣದಲ್ಲಿ ಕುಂದುಕೊರತೆ ಸಭೆ ಆಯೋಜಿಸಿ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದರು. ಈ ವೇಳೆ ಮಾತನಾಡಿದ ಅವರು, ತುರ್ತು ಕ್ರಿಯಾ ಯೋಜನೆ ಸಿದ್ಧಪಡಿಸಿ ಹೊಸ ಕೊಳವೆ ಬಾವಿಗಳನ್ನು ಕೊರೆಸಿ ಶಾಶ್ವತವಾಗಿ ನೀರಿನ ಸಮಸ್ಯೆ ಬಗೆಹರಿಸುವವರೆಗೆ ಮೂರು ಟ್ಯಾಂಕರ್‌ಗಳ ಮೂಲಕ ಪ್ರತಿದಿನ ಪ್ರತಿ ಟ್ಯಾಂಕರ್ ಆರು ಟ್ರಿಪ್ ನೀರು ಪೂರೈಕೆ ಮಾಡಬೇಕು. ಸಾರ್ವಜನಿಕರಿಗೆ ನೀರಿನ ಸಂಕಷ್ಟ ಎದುರಾಗದಂತೆ ನೋಡಿಕೊಳ್ಳಬೇಕು ಎಂದು ಸಭೆಯಲ್ಲಿದ್ದ ನೀರು ಸರಬರಾಜು ಇಲಾಖೆಯ ಜೆಇ ಹಾಗೂ ಗ್ರಾಪಂ ಪಿಡಿಒಗೆ ಸೂಚಿಸಿದರು.

ವಿಬಿ-ಜಿ ರಾಮ್ ಜಿ ಯೋಜನೆಯಡಿ ಕೃಷಿಕರು ಹಾಗೂ ಕೂಲಿಕಾರರಿಗೆ ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳನ್ನು ನೀಡಬೇಕು. ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿದ್ದು, ಗ್ರಾಮ ವನ ನಿರ್ಮಿಸಲು ಯೋಜನೆ ರೂಪಿಸಿಕೊಳ್ಳಬೇಕು ಎಂದು ಪಿಡಿಒಗೆ ನಿರ್ದೇಶಿಸಿದರು. ಮುರಾಳ್ ಹಾಗೂ ಕೇರೂರು ಗ್ರಾಮದ ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು.

ಬಳಿಕ ನಿಟ್ಟೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಹಾಗೂ ಆರೋಗ್ಯ ಸಿಬ್ಬಂದಿ ಕರ್ತವ್ಯದ ಅವಧಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಆಸ್ಪತ್ರೆಯಲ್ಲಿ ಅಗತ್ಯ ಲಸಿಕೆಗಳು ಹಾಗೂ ಔಷಧಿಗಳ ಕೊರತೆ ಇರಬಾರದು. ಔಷಧಿಗಳ ದಾಸ್ತಾನು ಮುಗಿದ ತಕ್ಷಣ ಸರ್ಕಾರಿ ನಿಯಮಾವಳಿ ಹಾಗೂ ಪ್ರಕ್ರಿಯೆಯಂತೆ ಖರೀದಿ ಮಾಡಬೇಕು. ಗ್ರಾಮಸ್ಥರು ನೀಡುತ್ತಿರುವ ದೂರುಗಳ ಪ್ರಕಾರ ಔಷಧಿಗಳ ಕೊರತೆಯ ನೆಪವೊಡ್ಡಿ ಹೊರರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ರೆಫರ್ ಮಾಡುತ್ತಿರುವುದನ್ನು ಸಹಿಸುವುದಿಲ್ಲ. ಕರ್ತವ್ಯದಲ್ಲಿ ನಿಷ್ಕಾಳಜಿ ತೋರುವ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿಯನ್ನು ಯಾವುದೇ ಮುಲಾಜಿಲ್ಲದೆ ಅಮಾನತುಗೊಳಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ನಿಟ್ಟೂರು ಗ್ರಾಮಕ್ಕೆ ಹೊಂದಿಕೊಂಡು ಹರಿಯುವ ಮಾಂಜ್ರಾ ನದಿಗೆ ಗ್ರಾಮದ ಶೌಚದ ನೀರು, ಬಚ್ಚಲು ನೀರು ಹಾಗೂ ಚರಂಡಿ ನೀರು ಸೇರದಂತೆ ಗ್ರಾಮಸ್ಥರು ಎಚ್ಚರ ವಹಿಸಬೇಕು. ನದಿಯ ಸ್ವಚ್ಛತೆ ಹಾಗೂ ಪಾವಿತ್ರ್ಯ ಕಾಪಾಡುವುದು ಗ್ರಾಮ ಪಂಚಾಯಿತಿಯ ಜೊತೆಗೆ ಸಾರ್ವಜನಿಕರ ಜವಾಬ್ದಾರಿಯೂ ಆಗಿದೆ ಎಂದು ಸಲಹೆ ನೀಡಿದರು.

ನಂತರ ನಿಟ್ಟೂರು ಗ್ರಾಮದಲ್ಲಿ ವಿಬಿಜಿ ರಾಮ್ ಜಿ ಯೋಜನೆಯಡಿ ನಡೆಯುತ್ತಿದ್ದ ಸಮುದಾಯ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಭಾಲ್ಕಿ ತಾಪಂ ಇಒ ಬೀರೇಂದ್ರಸಿಂಗ್ ಠಾಕೂರ್ ಸಿಡಿಪಿಒ, ನೀರು ಸರಬರಾಜು ಇಲಾಖೆಯ ಜೆಇ, ತಾಪಂ ಸಹಾಯಕ ನಿರ್ದೇಶಕರು ಬಾಲಾಜಿ ಕೋಟೆ, ಬಿರಿ (ಕೆ) ಗ್ರಾಪಂ ಪಿಡಿಒ ಡಾ.ಗೀತಾ, ತಾಂತ್ರಿಕ ಸಂಯೋಜಕ ಅಮರನಾಥ್ ಪಾಟೀಲ್, ಐಇಸಿ ಸಂಯೋಜಕ ಗಣಪತಿ ಹರಕೂಡೆ, ಟಿಎಇ ಆನಂದ್ ಸಾಗರ್ ಹಾಗೂ ಮುಕೇಶ್ ಪಾಟೀಲ್ ಸೇರಿದಂತೆ ಇತರರು ಇದ್ದರು.

ಮೋದಿ ಸರ್ಕಾರ ಕಾನೂನುಬಾಹಿರ; ಬ್ಯಾಲೆಟ್ ಪೇಪರ್ ಮೂಲಕ ಮರುಚುನಾವಣೆ ನಡೆಸಲಿ

ಕಲಬುರಗಿ,ಅ.04-

ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಅಪಾಯದಲ್ಲಿದ್ದು, ಈಗಿರುವ ಮೋದಿ ಸರ್ಕಾರವೇ ಕಾನೂನುಬಾಹಿರವಾಗಿದೆ. ಕೂಡಲೇ ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್ ಮೂಲಕ ಮತ್ತೊಮ್ಮೆ ಚುನಾವಣೆ ನಡೆಸಬೇಕು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆಗ್ರಹಿಸಿದರು.



ನಗರದ ಐವಾನ್-ಎ-ಶಾಹಿ ಪ್ರದೇಶದಲ್ಲಿರುವ ತಮ್ಮ ನಿವಾಸದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ವಿವಿಧ ರಾಜ್ಯಗಳ ಬಿಜೆಪಿ ಮುಖ್ಯಮಂತ್ರಿಗಳೇ ಕಾನೂನುಬಾಹಿರವಾಗಿ ಅಧಿಕಾರದಲ್ಲಿದ್ದಾರೆ ಎಂದು ಆರೋಪಿಸಿದರು. ''ದೇಶದಲ್ಲಿ ಈಗ ಕಾನೂನುಬಾಹಿರ ಆಡಳಿತ ನಡೆಯುತ್ತಿದೆ. ಸರ್ಕಾರಗಳನ್ನು ತೆಗೆದು ನ್ಯಾಯಯುತವಾಗಿ ಮತಪತ್ರದ ಮೂಲಕ ಮತ್ತೊಮ್ಮೆ ಚುನಾವಣೆ ನಡೆಸಬೇಕು'' ಎಂದು ಒತ್ತಾಯಿಸಿದರು.

''ಪ್ರಜಾಪ್ರಭುತ್ವ ಉಳಿಯಬೇಕಾದರೆ ಪ್ರತಿಯೊಬ್ಬರ ಮತ ಸುರಕ್ಷಿತವಾಗಿರಬೇಕು. ಸಂವಿಧಾನ ನೀಡಿರುವ ಮತದಾನದ ಹಕ್ಕಿನಿಂದಲೇ ಬಡವರು ಮತ್ತು ಸಾಮಾನ್ಯ ಜನರಿಗೆ ಪ್ರಜಾಪ್ರಭುತ್ವದಲ್ಲಿ ಮಹತ್ವ ದೊರೆತಿದೆ. ಎಸ್‌ಐಆರ್ ಪ್ರಕ್ರಿಯೆ ಮೂಲಕ ದಲಿತ, ಅಲ್ಪಸಂಖ್ಯಾತರ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ. ಆ ಹಕ್ಕನ್ನು ರಕ್ಷಿಸುವುದು ನಮ್ಮ ಹೋರಾಟದ ಉದ್ದೇಶ'' ಎಂದು ಅವರು ಹೇಳಿದರು.

''ಬಡವರ ಬಳಿ ಅಗತ್ಯ ದಾಖಲೆಗಳು ಇರುವುದಿಲ್ಲ. ಹಲವರು ಕೆಲಸಕ್ಕಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಾರೆ. ಇಂತಹವರು ಮತದಾರರ ಪಟ್ಟಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಹೇಗೆ ಪೂರ್ಣಗೊಳಿಸಬೇಕು?'' ಎಂದು ಪ್ರಶ್ನಿಸಿದರು.

ಫಾರ್ಮ್-6, ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕುವುದು ಹಾಗೂ ಮತ್ತೆ ಸೇರ್ಪಡೆಗೊಳಿಸುವ ಪ್ರಕ್ರಿಯೆಗಳ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ಮತದಾನದ ಹಕ್ಕನ್ನು ರಕ್ಷಿಸಲು ಮುಂಬರುವ ದಿನಗಳಲ್ಲಿ ಪ್ರತಿಪಕ್ಷಗಳು ದೇಶದಾದ್ಯಂತ ಒಗ್ಗಟ್ಟಾಗಿ ಹೋರಾಟ ನಡೆಸಲಿವೆ ಎಂದರು.

2023ರಲ್ಲಿ ಚುನಾವಣಾ ಆಯುಕ್ತರಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ತಂದಿರುವ ಕಾನೂನಿನಲ್ಲಿನ ಅಂಶಗಳ ಬಗ್ಗೆಯೂ ಆಕ್ಷೇಪ ವ್ಯಕ್ತಪಡಿಸಿದ ಅವರು, ಚುನಾವಣಾ ಆಯುಕ್ತರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರದಲ್ಲಿ ಕಾನೂನು ರಕ್ಷಣೆಯನ್ನು ಒದಗಿಸಿರುವುದು ತಪ್ಪು. ಅವರು ಅಕ್ರಮ, ಕಾನೂನು ಬಾಹಿರ ಕ್ರಮಗಳನ್ನು ಕೈಗೊಂಡರೂ ಅವರ ವಿರುದ್ಧ ತನಿಖೆಗೆ ಹಸ್ತಕ್ಷೇಪ ಮಾಡಬಾರದು ಎನ್ನುವುದು ಖಂಡನಾರ್ಹ ಎಂದು ಅವರು ಅಭಿಪ್ರಾಯಪಟ್ಟರು.

ಚುನಾವಣಾ ಆಯೋಗದ ಸದಸ್ಯರ ನೇಮಕಾತಿ ಪ್ರಕ್ರಿಯೆಯಲ್ಲಿಯೂ ಕೇಂದ್ರ ಸರ್ಕಾರದ ಪ್ರಾಬಲ್ಯ ಹೆಚ್ಚಾಗಿದೆ ಎಂದು ಆರೋಪಿಸಿದ ಅವರು, ಪ್ರಧಾನ ಮಂತ್ರಿ, ಕೇಂದ್ರ ಗೃಹ ಸಚಿವ ಹಾಗೂ ವಿರೋಧ ಪಕ್ಷದ ನಾಯಕರು ಒಳಗೊಂಡ ಸಮಿತಿಯಲ್ಲಿ ಸರ್ಕಾರದ ಇಬ್ಬರು ಸದಸ್ಯರು ಬಹುಮತ ಹೊಂದಿರುವುದರಿಂದ ನಿರ್ಧಾರಗಳ ಮೇಲೆ ಸರ್ಕಾರದ ಪ್ರಭಾವ ಹೆಚ್ಚಾಗುತ್ತದೆ ಎಂದು ಹೇಳಿದರು.

ಡಾ.ಅಂಬೇಡ್ಕರ್ ಜವಾಹರಲಾಲ್ ನೆಹರೂ, ಗಾಂಧೀಜಿ, ವಲ್ಲಭ ಭಾಯಿ ಪಟೇಲ್, ಅವರೆಲ್ಲರೂ ಕೂಡಿ ಮಾಡಿರುವ ಆಯೋಗವಿದು. ಇಂಥ ಆಯೋಗವನ್ನು ತೆಗೆದು ಹಾಕುತ್ತೀರಾ? ಅವರಿಗಿಂತ ಮೋದಿ ಶಾ ಅವರೇ ಜಾಣರೇ? ಎಂದು ಪತ್ರಕರ್ತರು ಕೇಳಿರುವ ಪ್ರಶ್ನೆಗೆ ಉತ್ತರಿಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಸರ್ವಾಧಿಕಾರಿ ಧೋರಣೆ ಕುರಿತು ಚುನಾವಣಾ ಆಯುಕ್ತರಿಬ್ಬರೂ 10 ತಿಂಗಳಲ್ಲಿ 14 ಬಾರಿ ದೂರು ನೀಡಿದ್ದಾರೆ. ಅವರ ದೂರಿಗೂ ಬೆಲೆ ಇಲ್ಲ. ಇಂತಹ ನಡೆ ದೇಶಕ್ಕೆ ಹಾನಿಕರಕ ಎಂದು ಹೇಳಿದರು.

''ಇವಿಎಂ ಬದಲಿಗೆ ಬ್ಯಾಲೆಟ್ ಪೇಪರ್ ಬಳಸಿ''

''ಇವಿಎಂ ಎಂದರೆ ಮೋಸ'' ಎಂದು ಆರೋಪಿಸಿದ ಖರ್ಗೆ, ಇವಿಎಂ ವ್ಯವಸ್ಥೆಯನ್ನು ತೆಗೆದುಹಾಕಿ ದೇಶಾದ್ಯಂತ ಬ್ಯಾಲೆಟ್ ಪೇಪರ್ ಮೂಲಕ ಚುನಾವಣೆ ನಡೆಸಬೇಕು. ನ್ಯಾಯಯುತವಾಗಿ ಮತ್ತೊಮ್ಮೆ ಮತಪತ್ರಗಳ ಮೂಲಕ ಚುನಾವಣೆ ನಡೆಯಬೇಕು. ಇವಿಎಂ ದೇಶದ ಪ್ರಜಾಪ್ರಭುತ್ವವನ್ನು ನಾಶ ಮಾಡುತ್ತದೆ'' ಎಂದು ಅವರು ಹೇಳಿದರು.

ಪ್ರತಿಭಟನೆ ನಡೆಸುವವರಿಗೆ ಬೆದರಿಕೆ ಹಾಕಲಾಗುತ್ತಿದೆ ಎಂದು ಆರೋಪಿಸಿದ ಅವರು, ಯಾವುದೇ ಒತ್ತಡಕ್ಕೂ ತಮ್ಮ ಹೋರಾಟ ನಿಲ್ಲುವುದಿಲ್ಲ. ಎಸ್‌ಐಆರ್ ವಿರುದ್ಧ ಅಕ್ಟೋಬರ್ 6ರಂದು ರಾಜ್ಯಾದ್ಯಂತ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಮುಂದುವರಿಯಲಿದೆ ಎಂದು ಅವರು ಹೇಳಿದರು.

ಒಂದನೇಯ ಪುಟದಿಂದ

ನೂತನ ಅಧ್ಯಕ್ಷರ ಆಯ್ಕೆ ಅನಧಿಕೃತವೆಂಬ ಆರೋಪ ಸತ್ಯಕ್ಕೆ ದೂರ ಅಧಿಕಾರಾವಧಿ ಪೂರ್ಣಗೊಂಡ ಬಳಿಕ ಸರ್ವಾನುಮತದಿಂದ ಆಯ್ಕೆ

ಗೌರವಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಯಾವುದೇ ಒತ್ತಡ ಅಥವಾ ಸರ್ವಾಧಿಕಾರಿ ಧೋರಣೆಯಿಂದ ಆಯ್ಕೆ ನಡೆದಿಲ್ಲ. ಸಮಾಜದ ಎಲ್ಲರಿಗೂ ಅವಕಾಶ ಕಲ್ಪಿಸುವ ಪ್ರಜಾಪ್ರಭುತ್ವದ ಆಶಯದಂತೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ. ''ಸಮಾಜ ದೊಡ್ಡದು, ವ್ಯಕ್ತಿ ದೊಡ್ಡವನಲ್ಲ'' ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಅನಗತ್ಯ ಹೇಳಿಕೆಗಳಿಂದ ಗೊಂದಲ ಸೃಷ್ಟಿಸುವ ಬದಲು ಸಮಾಜದ ಒಗ್ಗಟ್ಟು ಮತ್ತು ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮನವಿ ಮಾಡಿದರು.

ಹಿಂದಿನ ಅಧ್ಯಕ್ಷರು ತಮ್ಮ ಅಧಿಕಾರಾವಧಿಯಲ್ಲಿ ನಡೆಸಿದ ಸಾಮಾನ್ಯ ಸಭೆಗಳು, ಸಮುದಾಯ ಭವನದ ಅಭಿವೃದ್ಧಿ ಹಾಗೂ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸಿರುವ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಜನಪ್ರತಿನಿಧಿಗಳಿಂದ ದೊರೆತ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಸಮಾಜದ ಪ್ರಗತಿಗೆ ಶ್ರಮಿಸುವುದು ಪ್ರತಿಯೊಬ್ಬ ಪದಾಧಿಕಾರಿಯ ಕರ್ತವ್ಯವಾಗಿದೆ ಎಂದರು.

ನೂತನ ಪದಾಧಿಕಾರಿಗಳ ಆಯ್ಕೆ ಹಿರಿಯರು ಹಾಗೂ ಸರ್ವಸದಸ್ಯರ ಸಮ್ಮತಿಯೊಂದಿಗೆ ನಡೆದಿದ್ದು, ಇದರಲ್ಲಿ ಯಾವುದೇ ಅನಧಿಕೃತತೆ ಇಲ್ಲ. ಸಮಾಜದ ಒಗ್ಗಟ್ಟು ಕಾಪಾಡಲು ಎಲ್ಲರೂ ಸಹಕರಿಸಬೇಕು ಎಂದು ಜಿ. ಶಿವಮೂರ್ತಿ ಹೇಳಿದರು.

ರಾಯಚೂರು ವಿ.ವಿ.ಬೆಳವಣಿಗೆ ಸಹಿಸದ ಹೋರಾಟಗಾರ ನಡೆ ಖಂಡನೀಯ

ರವಿಗೌಡ ಮೀರಾಪುರ್ ಹಮ್ಮಿಕೊಂಡಿರುವ ಹೋರಾಟವನ್ನು ಭಾರತೀಯ ಸೇವಾ ಸಮಿತಿ ಮತ್ತು ಅದರ ಕಾರ್ಯಕಾರಿ ಸಮಿತಿ ಸದಸ್ಯರು ಗಳು ತೀವ್ರವಾಗಿ ಈ ಹೋರಾಟವನ್ನು ವಿರೋಧಿ ಸುತ್ತದೆ .

ಆದಿಕವಿ ಶ್ರೀ ಮಹರ್ಷಿ ವಿಶ್ವವಿದ್ಯಾಲಯವು ಸರ್ವಾಂಗೀಣ ರೀತಿಯಲ್ಲಿ ಅಭಿವೃದ್ಧಿ ಹೊಂದುತ್ತಿರು ವುದನ್ನು ಪ್ರಜ್ಞಾವಂತ ನಾಗರಿಕರು ಬೆಂಬಲಿಸಬೇಕು, ವಿಶ್ವವಿದ್ಯಾಲಯದ ಆಡಳಿತ ವರ್ಗದವರನ್ನು ನೈತಿಕವಾಗಿ ಅವರಿಗೆ ಆತ್ಮ ಧೈರ್ಯವನ್ನು ನೀಡುವು ದು ನಮ್ಮೆಲ್ಲರ ಕರ್ತವ್ಯವಾಗಿದೆ, ಹಿಂದುಳಿದ ಪ್ರದೇ ಶಕ್ಕೆ ವಿಶ್ವವಿದ್ಯಾಲಯ ಬಂದಿರುವುದು ನಮ್ಮೆಲ್ಲರ ಸಾಮಾಜಿಕ, ಶೈಕ್ಷಣಿಕ ಪ್ರಗತಿಯ ಸಂಕೇತವಾಗಿದೆ ಇದನ್ನು ಮರೆತು ಇಲ್ಲ ಸಲ್ಲದ ಅಪವಾದಗಳನ್ನು ಮುಂದೆಮಾಡಿಕೊಂಡು ವಿಶ್ವವಿದ್ಯಾಲಯಕ್ಕೆ ಕಪ್ಪು ಚುಕ್ಕೆ ಹಚ್ಚುವುದು ಎಷ್ಟು ಸರಿ ? ಇಂತಹ ಅಪವಾದಗಳು ನಿಲ್ಲದೆ ಹೋದರೆ, ನಮ್ಮ ಸಂಘಟನೆಗಳು ಮುಂದಿನ ದಿನಮಾನದಲ್ಲಿ ಇಂತಹ ಹೋರಾಟಗಾರರ ವಿರುದ್ಧವೇ ಹೋರಾಟ ಮಾಡಬೇಕಾಗುತ್ತದೆ ಎಚ್ಚರಿಕೆ ನೀಡಿದರು.

ಯೋಜನಾ ವಿಭಾಗದ ಇಇಗೆ ಕುಡಿಯುವ ನೀರು ವಿಭಾಗದ ಹೆಚ್ಚುವರಿ ಹೊಣೆ ಆರೋಪ : ಸಿಇಓ ವಿರುದ್ಧ ದೂರು

ನೀಡುವುದು ಕೆಸಿಎಸ್‌ಆರ್ ಹಾಗೂ ಕೆಆರ್‌ಆರ್‌ಡಿಎ ನಿಯಮಗಳ ಪ್ರಕಾರ ಸರಿಯೇ ಎಂಬುದನ್ನು ಸ್ಪಷ್ಟಪಡಿಸಬೇಕು. ಒಂದು ವೇಳೆ ಪೂರ್ವಾನುಮತಿ ಇಲ್ಲದೆ ಜಿ.ಪಂ. ಸಿಇಓ ಅವರು ಇಲಾಖೆಯೇತರ ವಿಭಾಗದ ಪ್ರಭಾರ ವಹಿಸುವಂತೆ ಆದೇಶ ನೀಡಿದ್ದರೆ, ಅಂತಹ ಆದೇಶ ಪಾಲಿಸದಂತೆ ಯೋಜನಾ ವಿಭಾಗದ ಎಲ್ಲ ಕಾರ್ಯಪಾಲಕ ಅಭಿಯಂತರರಿಗೆ ಸ್ಪಷ್ಟ ಸುತ್ತೋಲೆ ಹೊರಡಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಬಿಜೆಪಿ ಸ್ವಾಯತ್ತ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು ಪ್ರಜಾಪ್ರಭುತ್ವ ನಾಶಗೊಳಿಸಲು ಹೊರಟಿದೆ: ಸಚಿವ ಈಶ್ವರ್ ಖಂಡ್ರೆ



ಬೀದರ್,ಅ.04-

ಬಿಜೆಪಿಯವರು ಎಲ್ಲಾ ಸ್ವಾಯತ್ತ ಸಂಸ್ಥೆಗಳು ದುರುಪಯೋಗ ಮಾಡಿಕೊಂಡು ಪ್ರಜಾಪ್ರಭುತ್ವ ನಾಶಗೊಳಿಸಲು ಹೊರಟಿದ್ದಾರೆ. ಅವರಿಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲದಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಅವರು ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಹರಿ ಹಾಯ್ದರು.

ನಗರದ ವಿ ಆರ್ ಸಿ ಫಂಕ್ಷನ್ ಹಾಲ್ ನಲ್ಲಿ ಶುಕ್ರವಾರ ಜಿಲ್ಲಾ ಕಾಂಗ್ರೆಸ್ ಪಕ್ಷದ ನೂತನ ಜಿಲ್ಲಾಧ್ಯಕ್ಷ 'ಅಬ್ದುಲ್ ಮನ್ನಾನ್ ಸೇಠ್' ಅವರ ಪದಗ್ರಹಣ ಕಾರ್ಯಕ್ರಮ ನಡೆಯಿತು. ನಿಕಟಪೂರ್ವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಸವರಾಜ್ ಜಾಬಶೆಟ್ಟಿ ಅವರು ಕಾಂಗ್ರೆಸ್ ಧ್ವಜ ನೀಡುವ ಮೂಲಕ ಅಬ್ದುಲ್ ಮನ್ನಾನ್ ಸೇಠ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಈ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಪಕ್ಷದ ವರಿಷ್ಠರು ಮನ್ನಾನ್ ಸೇಠ್ ಅವರಿಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಜವಾಬ್ದಾರಿ ನೀಡಿದ್ದಾರೆ. ಅವರಿಗೆ ಆ ಜವಾಬ್ದಾರಿ ನೀಡುವ ಕಾರ್ಯಕ್ರಮ ಇದಾಗಿದೆ ಎಂದರು.

ನಮ್ಮ ಪಕ್ಷದ ಎಲ್ಲ ನಾಯಕರು ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ. ಮುಂದೆ ಬರುವ ಎಲ್ಲ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ತರುತ್ತೇವೆ. ಆರು ವಿಧಾನಸಭೆಗಳಲ್ಲಿ ಗೆಲ್ಲುವ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದ ಅವರು, ಅಬ್ದುಲ್ ಮನ್ನಾನ್ ಸೇಠ್ ಅವರಿಗೆ ಅಭಿನಂದಿಸಿ, ಶುಭ ಹಾರೈಸಿದರು.

ಬಿಜೆಪಿಯವರು ಮತ್ತೆ ವೋಟ್ ಚೋರಿ ಆರಂಭ ಮಾಡಿದ್ದಾರೆ. ಇದು ಅಪರಾಧವಾಗಿದೆ. ಬಿಜೆಪಿಯವರು ಹೇಗಾದರೂ ಮಾಡಿ ಅಧಿಕಾರಕ್ಕೆ ಬರುವ ಪ್ರಯತ್ನ ಮಾಡುತ್ತಿದ್ದಾರೆ. ಭಾಲ್ಕಿಯಲ್ಲಿಯೂ ಕೂಡ ಆಧಾರವಿಲ್ಲದೆ ಫಾರ್ಮ್-7 ಭರ್ತಿ ಮಾಡುವ ಮೂಲಕ ಮತದಾರರ ಹಕ್ಕು ಕಸಿದುಕೊಳ್ಳುವ ಪ್ರಯತ್ನ ನಡೆದಿದೆ. ಯಾರು ಈ ಕೃತ್ಯದಲ್ಲಿ ಭಾಗಿಯಾಗಿದ್ದಾರೆಯೋ ಅವರನ್ನು ಜೈಲಿಗಟ್ಟುವ ಸಲುವಾಗಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ತಿಳಿಸಿದರು.

ನಮ್ಮ ಕಾಂಗ್ರೆಸ್ ಪಕ್ಷ ಎಲ್ಲಾ ಜಾತಿ ಮತದವರನ್ನು ಜೊತೆಗೆ ತೆಗೆದುಕೊಂಡು ಹೋಗುತ್ತದೆ. ಆದರೆ ಬಿಜೆಪಿ ಪಕ್ಷ ಆಪರೇಷನ್ ಕಮಲ ಮಾಡುವ ಮೂಲಕ ಅಧಿಕಾರಕ್ಕೆ ಬಂದಿತ್ತು. ಆದರೂ ಕೂಡ ಅವರು ಏನು ಅಭಿವೃದ್ಧಿ ಕೆಲಸ ಮಾಡಲಿಲ್ಲ. ಬಿಜೆಪಿಯವರು ಕೇಂದ್ರದಲ್ಲಿ ಬಂದ ನಂತರ ಡಿಸೆಲ್, ಪೆಟ್ರೋಲ್ ಹಾಗೂ ಸಕ್ಕರೆ ಸೇರಿದಂತೆ ಹಲವಾರು ವಸ್ತುಗಳ ಬೆಲೆ ಏರಿಕೆಯಾಗಿದೆ. ಹಾಗೆಯೇ ರೈತರನ್ನು ಕಡೆಗಣಿಸಿ, ಬರೀ ಉದ್ಯಮಿಗಳ ಸಾಲ ಮನ್ನಾ ಮಾಡಲಾಗಿದೆ ಎಂದು ಅವರು ಹೇಳಿದರು.

ಸಂಸದ ಸಾಗರ್ ಖಂಡ್ರೆ ಅವರು ಮಾತನಾಡಿ, ಅಬ್ದುಲ್ ಮನ್ನಾ ಸೇಠ್ ಅವರು ಕಾಂಗ್ರೆಸ್ ನ ಜಿಲ್ಲಾಧ್ಯಕ್ಷರಾದಾಗ 'ಈಶ್ವರ್ ಖಂಡ್ರೆಗೆ ಹಿನ್ನಡೆ, ರಾಜಶೇಖರ್ ಪಾಟೀಲ್ ಗೆ ಮುನ್ನಡೆ' ಎಂದು ಕೆಲವು ಪತ್ರಿಕೆಗಳು ವರದಿ ಮಾಡಿದ್ದವು.

ಆದರೆ, ಈಶ್ವರ್ ಖಂಡ್ರೆ ಮತ್ತು ರಾಜಶೇಖರ್ ಪಾಟೀಲ್ ಅವರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನಾವೆಲ್ಲರೂ ಕಾಂಗ್ರೆಸ್ ಪಕ್ಷದವರಾಗಿದ್ದೇವೆ. ಮುಂದಿನ ಚುನಾವಣೆಗಳೇ ನಮಗೆ ಗುರಿಯಾಗಿವೆ ಎಂದರು.

ಅಧಿಕಾರ ಸ್ವೀಕರಿಸಿದ ಅಬ್ದುಲ್ ಮನ್ನಾನ ಸೇಠ್ ಅವರು ಮಾತನಾಡಿ, ನಮ್ಮ ದೇಶಕ್ಕೆ ಸ್ವತಂತ್ರ ತಂದುಕೊಟ್ಟ ಪಕ್ಷದ ಜಿಲ್ಲಾಧ್ಯಕ್ಷನಾಗಿದ್ದಕ್ಕೆ ನನಗೆ ತುಂಬಾ ಖುಷಿಯಾಗಿದೆ. ಅದು ಗಾಂಧಿ ಜಯಂತಿ ದಿನದಂದು ಅಧಿಕಾರ ಸ್ವೀಕರಿಸಿದಕ್ಕೆ ನನಗೆ ತುಂಬಾ ಸಂತೋಷವಾಗಿದೆ ಎಂದು ಹೇಳಿದರು.

ಮಾಜಿ ಸಚಿವ ರಾಜಶೇಖರ್ ಪಾಟೀಲ್ ಅವರು ಮಾತನಾಡಿ, ಈಶ್ವರ್ ಖಂಡ್ರೆ ಅವರಿಗೆ ಹಿನ್ನಡೆ ಮತ್ತು ರಾಜಶೇಖರ್ ಪಾಟೀಲ್ ಅವರಿಗೆ ಮುನ್ನಡೆ ಎನ್ನುವುದು ಮಾಧ್ಯಮದವರ ಸೃಷ್ಟಿಯಾಗಿದೆ. ನಮ್ಮಲ್ಲಿ ಶಕ್ತಿ ಪ್ರದರ್ಶನ ಇರಬಾರದು. ನಮ್ಮದು ಬಿಜೆಪಿಯವರ ವಿರುದ್ಧ ಶಕ್ತಿ ಪ್ರದರ್ಶನ ಇರಬೇಕಾಗಿದೆ ಎಂದು ಹೇಳಿದರು.

ಶಾಸಕ ರಹೀಮ್ ಖಾನ್ ಅವರು ಮಾತನಾಡಿ, ಚುನಾವಣೆ ಬಂದಾಗ ಬಿಜೆಪಿಗರು ಕೋಮುವಾದ, ಗಲಭೆ ಪ್ರಾರಂಭ ಮಾಡುತ್ತಾರೆ. ಇದರಿಂದಾಗಿ ನಮ್ಮ ಪಕ್ಷದ ಕಾರ್ಯಕರ್ತರು ಹುಷಾರಾಗಿರಬೇಕು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಚಂದ್ರಶೇಖರ್ ಪಾಟೀಲ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷೆ ಮಾಲಾ ಬಿ. ನಾರಾಯಣರಾವ್, ಮಾಜಿ ವಿಧಾನ ಪರಿಷತ್ ಸದಸ್ಯರಾದ ಅರವಿಂದಕುಮಾರ್ ಅರಳಿ, ಕೆ. ಪುಂಡಲೀಕರಾವ್, ನಿಕಟಪೂರ್ವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಸವರಾಜ್ ಜಾಬಶೆಟ್ಟಿ, ಬಾಬು ಹೊನ್ನಾನಾಯಕ್, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಅಮೃತರಾವ್ ಚಿಮಕೋಡೆ, ಕಾಂಗ್ರೆಸ್ ಸಹಕಾರ ವಿಭಾಗದ ರಾಜ್ಯಾಧ್ಯಕ್ಷ ಧನರಾಜ್ ತಾಳಂಪಳ್ಳಿ ಸೇರಿದಂತೆ ಅನೇಕ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಹುಮನಾಬಾದ್ ಕುಡಿಯುವ ನೀರು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮನವಿ



ಹುಮನಾಬಾದ್,ಅ,04-

ಪಟ್ಟಣದ ಮಾಜಿ ಸಚಿವರ ಗೃಹ ಕಚೇರಿಯಲ್ಲಿ ಶನಿವಾರ ಚಿಟಗುಪ್ಪ ತಾಲ್ಲೂಕಿನ ಮಾಡಗೂಳ್ ಗ್ರಾಮದ ನಿವಾಸಿಗಳು ಕುಡಿಯುವ ನೀರು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮಾಜಿ ಸಚಿವ ರಾಜಶೇಖರ್ ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.

ಮಾಡಗೂಳ್ ಗ್ರಾಮದ ಮನೆಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಬೇಕು, ಚರಂಡಿಗಳನ್ನು ಸ್ವಚ್ಛಗೊಳಿಸಬೇಕು ಹಾಗೂ ಹೈಮಾಸ್ಟ್ ವಿದ್ಯುತ್ ದೀಪ ಅಳವಡಿಸಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದರು.

ಈ ವೇಳೆ ಗ್ರಾಮಸ್ಥ ಸುಧಾಕರ್ ಸಂಗಮ್ ಮಾತನಾಡಿ, ಪೈಪ್‌ಲೈನ್ ಅಳವಡಿಸದ ಪರಿಣಾಮ ಮಾಡಗೂಳ್ ಗ್ರಾಮದ ವಿವಿಧ ಓಣಿಗಳಿಗೆ ಕೆಲ ದಿನಗಳಿಂದ ನೀರು ಪೂರೈಕೆಯಾಗುತ್ತಿಲ್ಲ. ಇದರಿಂದ ದಿನನಿತ್ಯದ ಕೆಲಸಗಳಿಗೆ ನೀರು ಸಂಗ್ರಹಿಸಲು ಮಹಿಳೆಯರು ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ. ಆದ್ದರಿಂದ ಶೀಘ್ರವಾಗಿ ಪೈಪ್‌ಲೈನ್ ಅಳವಡಿಸಿ ನೀರು ಪೂರೈಸಬೇಕು ಎಂದು ಒತ್ತಾಯಿಸಿದರು.

ಮಾಡಗೂಳ್ ಗ್ರಾಮದ ಬಹುತೇಕ ಚರಂಡಿಗಳಲ್ಲಿ ತ್ಯಾಜ್ಯ ಸಂಗ್ರಹವಾಗಿದ್ದು, ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಇದರಿಂದ ಸ್ಥಳೀಯರು ಆರೋಗ್ಯಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸ್ಥಳೀಯರ ಆರೋಗ್ಯದ ಹಿತದೃಷ್ಟಿಯಿಂದ ಕೂಡಲೇ ಚರಂಡಿಗಳನ್ನು ಸ್ವಚ್ಛಗೊಳಿಸಬೇಕು. ಜತೆಗೆ ಐತಿಹಾಸಿಕ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಹೈಮಾಸ್ಟ್ ವಿದ್ಯುತ್ ದೀಪ ಅಳವಡಿಸಬೇಕು ಎಂದು ತಿಳಿಸಿದರು.

ಈ ವೇಳೆ ಮಾತನಾಡಿದ ಮಾಜಿ ಸಚಿವ ರಾಜಶೇಖರ್ ಪಾಟೀಲ್, ಮಾಡಗೂಳ್ ಗ್ರಾಮದ ಮನೆಗಳಿಗೆ ಪೈಪ್‌ಲೈನ್ ಮೂಲಕ ನೀರು ಪೂರೈಸುವ ಕುರಿತು ಈಗಾಗಲೇ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಶೀಘ್ರದಲ್ಲಿಯೇ ಚರಂಡಿ ಸ್ವಚ್ಛತೆ ಸೇರಿದಂತೆ ಗ್ರಾಮಸ್ಥರ ವಿವಿಧ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮಸ್ಥರಾದ ಶಿವಕುಮಾರ್ ಮದರಗಾಂವ್, ವಿಜಯಕುಮಾರ್ ಮದರಗಾಂವ್, ಪ್ರಭು ಕುಲಕರ್ಣಿ, ವೀರಶಟ್ಟಿ ಮದರಗಾಂವ್, ಗುಂಡುರೆಡ್ಡಿ ಶಹಾಬಾದ್, ಅನಿಲ್ ಮದರಗಾಂವ್, ಪ್ರಕಾಶರೆಡ್ಡಿ ಶೇರಿಕಾರ್ ರಾಜಶೇಖರ್ ಮದರಗಾಂವ್, ಹಣಮಂತ್ ಮದರಗಾಂವ್ ಹಾಗೂ ಅಪ್ಪರಾವ್ ಮದರಗಾಂವ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಕುಮಾರಸ್ವಾಮಿ ಅರಿಬೆ ಹಾವು ಬಿಡುತ್ತಾರೆ, ಆದರೆ ನಮ್ಮ ಹತ್ತಿರ ನಿಜವಾದ ಹಾವು ಇದ್ದಾವೆ: ಸಚಿವ ವಿಜಯಾನಂದ ಕಾಶಪ್ಪನವರ

ಬಾಗಲಕೋಟೆ,ಅ.04-

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಬರೀ ಅರಿಬೆ ಹಾವು ಬಿಡುತ್ತಾರೆ. ಆದರೆ ನಮ್ಮ ಹತ್ತಿರ ನಿಜವಾದ ಹಾವು ಇದ್ದಾವೆ.. ಸಂದರ್ಭ ಬಂದಾಗ ಬಿಡುತ್ತಿವೆ ಎಂದು ಸಣ್ಣ ಕೈಗಾರಿಕಾ ಸಚಿವ ವಿಜಯಾನಂದ ಕಾಶಪ್ಪನವರ ಹೇಳಿದ್ದಾರೆ.

ಬೀಳಗಿ ಪಟ್ಟಣದಲ್ಲಿ ಪ್ರಜಾಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿದ ಸಂದರ್ಭದಲ್ಲಿ ಅವರು ಮಾಧ್ಯಮದವರ ಜೊತೆ ಮಾತನಾಡುತ್ತಿದ್ದರು.

ನೈಸ್ ರಸ್ತೆ ವಿಚಾರವಾಗಿ ಸಚಿವರು ಕೋಟ್ಯಂತರ ರೂಪಾಯಿಗಳ ಭ್ರಷ್ಟಾಚಾರ ಆರೋಪ ಮಾಡಿದ ಕುಮಾರಸ್ವಾಮಿ ಹೇಳಿಕೆ ಪ್ರತಿಕ್ರಿಯೆ ನೀಡಿದ ಸಚಿವರು, ಕುಮಾರಸ್ವಾಮಿ ಅವರು ಯಾವಾಗಲೂ ಅರಿಬೆ ಹಾವು ಬಿಡುತ್ತಾರೆ ಎಂದು ತಿರುಗೇಟು ನೀಡಿದರು...

ರೈತರಿಗೆ ಕೇಂದ್ರ ಸರಕಾರ ದಿಂದ ಕಬ್ಬು ಬೆಳೆ ಎಂ ಎಸ್ ಪಿ...ಎಸ್ ಆರ್ ಪಿ ಫಿಕ್ಸ್ ಮಾಡಿಲ್ಲ. ಬರೀ ಸಿಎಂ ಗೆ ಆಹ್ವಾನ ಮಾಡಿದರೆ ಉಪಯೋಗ ಇಲ್ಲಾ... ಸರ್ವ ಪಕ್ಷ ನಿಯೋಗ ಕರೆದುಕೊಂಡು ಹೋಗಲಿ ಮುಖ್ಯಮಂತ್ರಿ ಸಿದ್ಧರಿದ್ದಾರೆ ಎಂದು ಕಬ್ಬು ಬೆಳೆಗಾರ ಹೋರಾಟಕ್ಕೆ ಸಂಬಂಧಿಸಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹೇಳಿಕೆಗೆ ಕಾಶಪ್ಪನವರ ತಿರುಗೇಟು ನೀಡಿದರು.

ಸಂಸತ್ತಿನಲ್ಲಿ ಸಕಾರಾತ್ಮಕ ಚರ್ಚೆ ನಡೆಸುವ ಬಗ್ಗೆ ವಿದ್ಯಾರ್ಥಿಗಳು ಜ್ಞಾನ ಪಡೆಯಲಿ



ಬೀದರ್,ಅ.04-

ಸಂಸತ್ತಿನಲ್ಲಿ ಸಕಾರಾತ್ಮಕವಾಗಿ ಹೇಗೆ ಚರ್ಚೆ ನಡೆಸಬೇಕು ಎಂಬುದರ ಕುರಿತು ವಿದ್ಯಾರ್ಥಿಗಳು ಜ್ಞಾನ ಪಡೆದುಕೊಳ್ಳಬೇಕು ಎಂದು ತಹಶೀಲ್ದಾರ್ ರವೀಂದ್ರ ದಾಮ ಅವರು ಹೇಳಿದರು.

ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನ್ನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ನಡೆದ ತಾಲ್ಲೂಕು ಮಟ್ಟದ ಯುವ ಸಂಸತ್ತು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮಸ್ಯೆಗಳು ಹಾಗೂ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳುವ ಮೂಲಕ ಸರ್ಕಾರದ ಯೋಜನೆಗಳ ನೆರವಿನಿಂದ ಅಭಿವೃದ್ಧಿ ಕಾರ್ಯಗಳನ್ನು ಹೇಗೆ ಸಾಧಿಸಬಹುದು ಎಂಬುದನ್ನು ಯುವಕರು ಅರಿಯಬೇಕು ಎಂದು ಹೇಳಿದರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ್ ಪಾಟೀಲ್ ಮಾತನಾಡಿ, ಶಿಕ್ಷಣ, ಆಹಾರ ಕಲಬೆರಕೆ, ಹಣದುಬ್ಬರ, ಮಕ್ಕಳ ಅಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಪ್ರಮುಖ ವಿಷಯಗಳಾಗಿವೆ. ವಿದ್ಯಾರ್ಥಿಗಳು ಯುವ ಸಂಸತ್ ವೇದಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಈ ವಿಷಯಗಳ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಂಚಾಯತ್ ರಾಜ್ ಸಹಾಯಕ ನಿರ್ದೇಶಕ ಸಂಜುಕುಮಾ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಯುವ ಸಂಸತ್ತಿಗೆ ಆಯ್ಕೆಯಾದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪೊಲೀಸರಿಂದ ಬೈಕ್ ಜಾಥಾ ಮೂಲಕ ಸಂಚಾರಿ ನಿಯಮಗಳ ಬಗ್ಗೆ ಜಾಗೃತಿ



ಸುರಪುರ,ಅ.04-

ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ಪೊಲೀಸರು ಬೈಕ್ ಜಾಥಾ ಮೂಲಕ ಸಂಚಾರಿ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಿದರು.

ಬೈಕ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಡಿವೈಎಸ್‌ಪಿ ಶಿವರಾಜ ಕಟಕಭಾವಿ, ಬೈಕ್ ಸವಾರರು ಎಲ್ಲೆಂದರಲ್ಲಿ ಬೈಕ್ ನಿಲ್ಲಿಸುತ್ತಿದ್ದು, ಅಡ್ಡಾದಿಡ್ಡಿ ಬೈಕ್ ನಿಲ್ಲಿಸಿದರೆ ಪೊಲೀಸರು ವಶಕ್ಕೆ ಪಡೆಯಲಿದ್ದಾರೆ ಎಂದು ಎಚ್ಚರಿಕೆ ನೀಡಿದ್ದಾರೆ.

ಸಂಚಾರಿ ನಿಯಮಗಳನ್ನು ಪಾಲಿಸುವುದರಿಂದ ಅಪಾಯವನ್ನು ತಪ್ಪಿಸಬಹುದು. ಅಲ್ಲದೆ ಕಿರಿದಾದ ರಸ್ತೆಗಳ ಪಕ್ಕದಲ್ಲಿ ಅಡ್ಡಾದಿಡ್ಡಿಯಾಗಿ ಬೈಕ್ ಗಳನ್ನು ನಿಲ್ಲಿಸುವುದರಿಂದ ವಾಹನಗಳ ಓಡಾಟಕ್ಕೆ ತುಂಬಾ ತೊಂದರೆ ಉಂಟಾಗುತ್ತಿದೆ.

ನಿಮ್ಮ ನಗರದ ಸುಗಮ ಸಂಚಾರ ನಿಮ್ಮ ಕೈಯಲ್ಲಿದೆ, ಆದ್ದರಿಂದ ಬೈಕ್ ಗಳನ್ನು ಪೊಲೀಸರು ಸೂಚಿಸಿದ ಸ್ಥಳಗಳಲ್ಲಿಯೇ ಸರಿಯಾಗಿ ನಿಲ್ಲಿಸುವ ಮೂಲಕ ನಿಯಮಗಳನ್ನು ಪಾಲಿಸುವಂತೆ ತಿಳಿಸಿದರು.

ದರ್ಬಾರ್ ರಸ್ತೆ, ಸರ್ದಾರ್ ವಲ್ಲಭಬಾಯಿ ಪಟೇಲ್ ವೃತ್ತ, ಹಳೆ ಬಸ್ ನಿಲ್ದಾಣ ಮಾರ್ಗವಾಗಿ ಸಾಗಿದ ಬೈಕ್ ರ್‍ಯಾಲಿ ಕುಂಬಾರಪೇಟೆ ನಂತರ ಮರಳಿ ಸುರಪುರಕ್ಕೆ ಆಗಮಿಸಿ ರಂಗಪೇಟೆಯಲ್ಲಿಯೂ ರ್‍ಯಾಲಿ ನಡೆಸುವ ಮೂಲಕ ಸಾರ್ವಜನಿಕರಲ್ಲಿ ಸಂಚಾರಿ ನಿಯಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಮೊಳಕೆಯೊಡೆಯದ ಬಿತ್ತಿದ ಶೇಂಗಾ ಬೀಜ, ಕಂಗಾಲಾದ ರೈತರು; ಕರವೇ ನೇತೃತ್ವದಲ್ಲಿ ಎಪಿಎಂಸಿ ಮುಂದೆ ಧರಣಿ



ಯಾದಗಿರಿ,ಅ.04-

ಬಿತ್ತಿದ ಶೇಂಗಾ ಬೀಜ ಮೊಳಕೆಯೊಡೆಯದೇ ಇರುವುದನ್ನು ಖಂಡಿಸಿ ತಾಲ್ಲೂಕಿನ ಹತ್ತಿಕುಣಿ ಭಾಗದ ರೈತರು ನಗರದ ಎಪಿಎಂಸಿ ಕಚೇರಿ ಎದುರು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ಟಿ.ಎನ್. ಭೀಮುನಾಯಕ ನೇತೃತ್ವದಲ್ಲಿ ದಿಢೀರ್ ಪ್ರತಿಭಟನೆ ನಡೆಸಿದರು.

ಬಿತ್ತಿದ ಬೀಜ ಬೆಳೆಯದ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ರೈತರ ಸಮಸ್ಯೆ ಆಲಿಸಿ ತಕ್ಷಣ ಸ್ಥಳಕ್ಕೆ ಭೇಟಿ ಕೊಟ್ಟ ಭೀಮುನಾಯಕ ವಾಸ್ತವ ಪರಿಸ್ಥಿತಿ ಅವಲೋಕಿಸಿದ ನಂತರ ನೇರವಾಗಿ ಎಪಿಎಂಸಿ ಕಚೇರಿಗೆ ರೈತರೊಂದಿಗೆ ಆಗಮಿಸಿ ದಿಢೀರ್ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮೊದಲೇ ಬರದ ಪರಿಸ್ಥಿತಿಯಿಂದ ಕಂಗೆಟ್ಟಿರುವ ರೈತರು ಇದ್ದ ಪಂಪ್ ಸೆಟ್ ಬಳಸಿಕೊಂಡು ಶೇಂಗಾ ಬೆಳೆಯಾದರೂ ಬಿತ್ತಿಕೊಳ್ಳಲೆಂದು ಎಪಿಎಂಸಿ ಆವರಣದಲ್ಲಿ ಬೀಜ ಖರೀದಿಸಿದ್ದಾರೆ. ಬರ ಪರಿಸ್ಥಿತಿ ಇದ್ದುದರಿಂದ ಕೃಷಿ ಇಲಾಖೆಯಿಂದ ಸಬ್ಸಿಡಿ ದರದಲ್ಲಿ ಶೇಂಗಾ ಬೀಜ ಪೂರೈಕೆ ಮಾಡದೇ ಇದ್ದುದರಿಂದ ರೈತರು ಎಪಿಎಂಸಿ ಆವರಣದಲ್ಲಿ ಪೂರೈಕೆ ಮಾಡಿದ ವೈಜ್ಞಾನಿಕವಾಗಿ ಉಪಚಾರ ಮಾಡದ ಬೀಜಗಳನ್ನು ದುಬಾರಿ ದರಕ್ಕೆ ಅಂದರೆ ಕ್ವಿಂಟಾಲ್ ಗೆ 15,000ರೂ. ನಂತೆ ಖರೀದಿಸಿ ಬಿತ್ತನೆ ಮಾಡಿ ಈಗ ಮೊಳಕೆ ಒಡೆಯದೇ ಕಂಗಾಲಾಗಿದ್ದಾರೆ. ಇದಕ್ಕೆ ಪರೋಕ್ಷವಾಗಿ ಸರ್ಕಾರವೂ ಕಾರಣವಾಗಿದ್ದು, ಜೊತೆಗೆ ಅಕ್ರಮವಾಗಿ ಕಳಪೆ ಗುಣಮಟ್ಟದ ನಕಲಿ ಬೀಜ ಮಾರಾಟ ಮಾಡಿದ ಅಂಗಡಿಕಾರರು ನೇರ ಹೊಣೆಗಾರರಾಗಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಕಳಪೆ ಬೀಜ ಮಾರಾಟ ಮಾಡಿದ ಅಂಗಡಿಯವರಾದ ಎಸ್.ಎಂ.ಪರಡಿ, ಹರ್ಷ ಟ್ರೇಡಿಂಗ್ ಕಂಪೆನಿ, ಉಮರ ಟ್ರೇಡಿಂಗ್ ಕಂ., ರಾಮಸಮುದ್ರ ಟ್ರೇಡಿಂಗ್ ಕಂ., ನಿರ್ಮಲಾ ಟ್ರೇರ್ಸ್, ಚಕ್ರಕಟ್ಟಾ ಬಳಿಯ ಚಟ್ನಳ್ಳಿ ಟ್ರೇಡಿಂಗ್ ಕಂ. ಸೇರಿದಂತೆ ಇನ್ನಿತರ ಅಂಗಡಿಯವರು ಕಳಪೆ ಬೀಜ ಪೂರೈಸಿ ರೈತರಿಗೆ ವಂಚಿಸಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಕರವೇ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದು ನಾಯಕ ಹತ್ತಿಕುಣಿ, ನಿಂಗಪ್ಪ ಗುಡಗುಡಿ, ಭೀಮರಾಯ ರಾಮಸಮುದ್ರ, ಸಿದ್ದಪ್ಪ ಕೊಯಿಲೂರ, ಅಶೋಕ ನಾಯಕ, ಮಲ್ಲಿಕಾರ್ಜುನ ಕನ್ನಡಿ, ಯಲ್ಲಾಲಿಂಗ ಚಾಮನಳ್ಳಿ, ಬಸವರಾಜ ಕವಲ್ದಾರ, ಅಶೋಕ ಮಸ್ಕನಳ್ಳಿ, ಸಾಬು ವರ್ಕನಳ್ಳಿ, ಚಂದ್ರಶೇಖರ ಕ್ಯಾಂಪ್, ಶಿವಾನಂದ, ಮುರುಗೇಂದ್ರ ಸೇರಿ ಅನೇಕ ರೈತರಿದ್ದರು.



ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆ: ಶರಣಪ್ಪ ಮಟ್ಟೂರ ಪರ ಕಾಂಗ್ರೆಸ್ ಮುಖಂಡರಿಂದ ಮತಯಾಚನೆ

ಸೇಡಂ,ಅ.04-

ಈಶಾನ್ಯ ಶಿಕ್ಷಕರ ಕ್ಷೇತ್ರದ ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯ ಕೃಷಿ ಪ್ರತಿನಿಧಿ ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಬಸವರಾಜ್ ಆರ್. ಪಾಟೀಲ್ ಊಡಗಿ ಅವರ ನೇತೃತ್ವದಲ್ಲಿ ನಗರದ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ, ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರ ಪರ ಮತಯಾಚನೆ ನಡೆಸಲಾಯಿತು.

ನಗರದ ವಿಶ್ವಜ್ಯೋತಿ ಶಾಲೆ, ನೃಪತುಂಗ ಡಿಗ್ರಿ ಕಾಲೇಜು, ಡಿ.ಡಿ.ಯು. ಪಿಯು ಸೈನ್ಸ್ ಕಾಲೇಜು ಹಾಗೂ ಜ್ಞಾನಜ್ಯೋತಿ ಐಟಿಐ ಕಾಲೇಜುಗಳಿಗೆ ಭೇಟಿ ನೀಡಿದ ಮುಖಂಡರು, ಶಿಕ್ಷಕರೊಂದಿಗೆ ಸಂವಾದ ನಡೆಸಿ ಅವರ ವಿವಿಧ ಸಮಸ್ಯೆಗಳು ಹಾಗೂ ಬೇಡಿಕೆಗಳ ಕುರಿತು ಚರ್ಚಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡರು, ಶಿಕ್ಷಕರ ಹಳೆಯ ಪಿಂಚಣಿ ಯೋಜನೆ, ವೇತನ ಪರಿಷ್ಕರಣೆ, ವಿವಿಧ ಭತ್ಯೆಗಳು ಸೇರಿದಂತೆ ಶಿಕ್ಷಕರಿಗೆ ಸಂಬಂಧಿಸಿದ ನ್ಯಾಯಸಮ್ಮತ ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆದು, ಅವುಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ನಡೆಸಲಾಗುವುದು ಎಂದು ತಿಳಿಸಿದರು.

ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವ ಹಾಗೂ ಅವರ ಹಿತಾಸಕ್ತಿಗಳನ್ನು ಕಾಪಾಡುವ ನಿಟ್ಟಿನಲ್ಲಿ ಶರಣಪ್ಪ ಮಟ್ಟೂರ ಅವರು ಕಾರ್ಯನಿರ್ವಹಿಸಲಿದ್ದಾರೆ ಎಂದು ತಿಳಿಸಿ, ಚುನಾವಣೆಯಲ್ಲಿ ಅವರಿಗೆ ಬೆಂಬಲ ನೀಡುವಂತೆ ಶಿಕ್ಷಕರಲ್ಲಿ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಶರಣ ರೆಡ್ಡಿಪಾಟೀಲ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ವಿಶ್ವನಾಥ್ ಪಾಟೀಲ್ ಬೊಮ್ಮನಳ್ಳಿ, ತಾಲೂಕು ಕೃಷಿ ಪ್ರತಿನಿಧಿಗಳ ಅಧ್ಯಕ್ಷ ಬಸವರಾಜ ರೇವಗೊಂಡ ತೊಟ್ನಳ್ಳಿ, ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಸಂಸದೀಯ ಸಮಿತಿ ಸಭೆಯಿಂದ ಸುಪ್ರೀಂ ಕೋರ್ಟ್ ಹಿಂದೆ ಸರಿದದ್ದು ಸ್ವಾಗತಾರ್ಹ!

ಸಂವಿಧಾನದ 143ನೇ ವಿಧಿಯಡಿ ಸಂಸದೀಯ ಸಮಿತಿಯು ಮಹತ್ವದ ಕಾನೂನು ರೂಪಿಸುವಾಗ, ಸುಪ್ರೀಂ ಕೋರ್ಟ್‌ನ ಸಲಹೆ ಪಡಯಬೇಕಿದ್ದರೆ, ರಾಷ್ಟ್ರಪತಿಗೆ ಅದನ್ನು ತಿಳಿಸಿ, ಅವರಿಂದ ಅನುಮತಿ ಪಡೆದು, ನ್ಯಾಯಾಂಗದ ಜೊತೆಗೆ ಮುಕ್ತ ಚರ್ಚೆ ನಡೆಸಲು ಅವಕಾಶ ನೀಡಲಾಗಿದೆ. ಇಂತಹ ಪಾರದರ್ಶಕ ಸಾಂವಿಧಾನಿಕ ಮಾರ್ಗವಿರುವಾಗ, ಸಂಸದೀಯ ಸಮಿತಿಯು ಮುಚ್ಚಿದ ಬಾಗಿಲಲ್ಲಿ 'ಅನೌಪಚಾರಿಕ' ಮಾತುಕತೆಗೆ ಮುಂದಾಗಿದ್ದು ಅಸಂವಿಧಾನಿಕ ಕ್ರಮ/ಧೋರಣೆ.



ಒಂದು ದೇಶ-ಒಂದು ಚುನಾವಣೆ ಎಂಬುದು ಕೇವಲ ಚುನಾವಣೆಯ ದಿನಾಂಕಗಳನ್ನು ಒಂದೇ ದಿನಕ್ಕೆ ತರುವ ಆಡಳಿತಾತ್ಮಕ ಪ್ರಯೋಗ ಮಾತ್ರವಲ್ಲ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಅವಧಿ, ರಾಜ್ಯಗಳ ರಾಜಕೀಯ ಸ್ವಾಯತ್ತತೆ, ಚುನಾವಣಾ ಆಯೋಗದ ಅಧಿಕಾರ ಹಾಗೂ ಭಾರತದ ಒಕ್ಕೂಟ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವ ಗಂಭೀರ ಸಂವಿಧಾನಾತ್ಮಕ ಬದಲಾವಣೆ.

ಇಂತಹ ಮಸೂದೆಯನ್ನು ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಮತ್ತು ಹಾಲಿ ನ್ಯಾಯಮೂರ್ತಿಗಳ ಜೊತೆ ಅನೌಪಚಾರಿಕ ಚರ್ಚೆ ನಡೆಸಲು ಮುಂದಾಗಿತ್ತು. ಅಕ್ಟೋಬರ್ 6ರಂದು ಈ ಸಂವಾದ ನಡೆಯಲಿದೆ ಎಂಬುದು ನ್ಯಾಯಾಲಯದ ಕಾರ್ಯಕ್ರಮ ಪಟ್ಟಿಯಲ್ಲಿ ಉಲ್ಲೇಖವಾಗಿತ್ತು. ಇದೀಗ, ಆ ಚರ್ಚೆಯನ್ನು ರದ್ದುಗೊಳಿಸಲಾಗಿದೆ. ಪ್ರಸ್ತಾವಿತ ತಿದ್ದುಪಡಿ ಮಸೂದೆಯು ನ್ಯಾಯಾಂಗ ಪರಿಶೀಲನೆಯ ವಿಷಯವಾಗಿ ನ್ಯಾಯಾಲಯದ ಮೆಟ್ಟಿಲು ಏರುವ ಸಾಧ್ಯತೆ ಇದೆ. ಹೀಗಿರುವಾಗ, ಈ ವಿಚಾರವಾಗಿ ಸಂಸದೀಯ ಸಮಿತಿಯೊಂದಿಗೆ ನ್ಯಾಯಾಧೀಶರು ಚರ್ಚಿಸುವುದು ಸೂಕ್ತವಲ್ಲ ಎಂದು ನ್ಯಾಯಾಲಯ ಹೇಳಿದೆ. ನ್ಯಾಯಾಲಯದ ಈ ಕ್ರಮ ಸ್ವಾಗತಾರ್ಹ.

ಆದಾಗ್ಯೂ, ಚರ್ಚೆ ಈಗ ರದ್ದಾಗಿರಬಹುದು. ಆದರೆ, ಅಂತಹದೊಂದು ವಿಷಯದಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗ ಚರ್ಚೆಗೆ ಮುಂದಾಗಿದ್ದವು ಎಂಬುದೇ ಕಳವಳಕಾರಿ. ಯಾಕೆಂದರೆ, ಸಂಸತ್ತು ರೂಪಿಸುವ ಕಾನೂನಿನ ಸಂವಿಧಾನಬದ್ಧತೆಯನ್ನು ಪರೀಕ್ಷಿಸುವುದೇ ಸುಪ್ರೀಂ ಕೋರ್ಟ್. ಹೀಗಿದ್ದಾಗ, ಕಾನೂನು ರೂಪಿಸುವವರು ಮಸೂದೆ ರೂಪುಗಳ್ಳುವ ಹಂತದಲ್ಲಿಯೇ ನ್ಯಾಯಮೂರ್ತಿಗಳ ಬಳಿಗೇ ಹೋಗಿ, ಆ ಬಗ್ಗೆ ಮಾತುಕತೆ ನಡೆಸಿದರೆ, ನಾಳೆ ಆ ಕಾನೂನನ್ನು ಪ್ರಶ್ನಿಸಿ ಸಲ್ಲಿಕೆಯಾಗುವ ಅರ್ಜಿಗಳ ಪರಿಸ್ಥಿತಿ ಏನಾಗಬಹುದು? ನ್ಯಾಯಾಂಗದ ಸ್ವಾತಂತ್ರ್ಯ ಎಲ್ಲಿಗೆ ಹೋಗಿ ನಿಲ್ಲಬಹುದು?

ಇದೇ ಪ್ರಶ್ನೆಯನ್ನು ಹಿರಿಯ ನ್ಯಾಯವಾದಿ ಕಪಿಲ್ ಸಿಬಲ್ ಕೂಡ ಎತ್ತಿದ್ದಾರೆ. ಮುಖ್ಯವಾಗಿ, ನ್ಯಾಯಾಂಗದ ಸ್ವಾತಂತ್ರ್ಯ ಎಂದರೆ ನ್ಯಾಯಮೂರ್ತಿಗೆ ಯಾರೂ ಫೋನ್ ಮಾಡಬಾರದು ಎನ್ನುವಷ್ಟು ಸಣ್ಣ ಕಲ್ಪನೆಯಲ್ಲ; ನ್ಯಾಯಾಧೀಶರು ತೀರ್ಪು ನೀಡುವ ಮೊದಲು ಯಾವ ರಾಜಕೀಯ ಅಥವಾ ಶಾಸನಾತ್ಮಕ ಪ್ರಕ್ರಿಯೆಯ ಭಾಗವಾಗಿದ್ದರೂ ಎಂಬ ಅನುಮಾನವೇ ಬಾರದಂತೆ ಕಾರ್ಯನಿರ್ವಹಿಸಬೇಕು.

ಭಾರತದ ಸಂವಿಧಾನವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗವನ್ನು ರೂಪಿಸಿದೆ. ಪ್ರತಿಯೊಂದಕ್ಕೂ ತನ್ನದೇ ಕಾರ್ಯವ್ಯಾಪ್ತಿಯನ್ನು ನಿಗದಿಪಡಿಸಿದೆ. 1955ರ ರಾಮ್ ಜವಾಯ ಕಪೂರ್ ಪಂಜಾಬ್ ರಾಜ್ಯ ಪ್ರಕರಣದಲ್ಲಿಯೂ ಸುಪ್ರೀಂ ಕೋರ್ಟ್, ''ಮೂರು ಅಂಗಗಳ ಕಾರ್ಯಕ್ಷೇತ್ರಗಳು ಸ್ಪಷ್ಟವಾಗಿ ವಿಭಜಿಸಲ್ಪಟ್ಟಿದ್ದು, ಒಂದು ಅಂಗವು ಇನ್ನೊಂದರ ಮೂಲ ಕಾರ್ಯವನ್ನು ಆಕ್ರಮಿಸಿಕೊಳ್ಳುವುದನ್ನು ಸಂವಿಧಾನ ಒಪ್ಪುವುದಿಲ್ಲ'' ಎಂದು ಸ್ಪಷ್ಟವಾಗಿ ಹೇಳಿತ್ತು.

ಮುಂದೆ, ಕೇಶವಾನಂದ ಭಾರತಿ, ಇಂದಿರಾ ಗಾಂಧಿ ರಾಜ್ ನಾರಾಯಣ್ ಸೇರಿದಂತೆ ಹಲವು ತೀರ್ಪುಗಳಲ್ಲಿ ಅಧಿಕಾರ ವಿಭಜನೆ ಮತ್ತು ನ್ಯಾಯಾಂಗ ಪರಿಶೀಲನೆಯ ತತ್ವಗಳು ಸಂವಿಧಾನದ ಮೂಲ ರಚನೆಯ ಭಾಗವೆಂದು ಕೋರ್ಟ್ ಸ್ಪಷ್ಟಪಡಿಸಿದೆ. 2015ರ ಎನ್‌ಜೆಎಸಿ ತೀರ್ಪಿನಲ್ಲಿಯೂ ನ್ಯಾಯಾಂಗದ ಸ್ವಾತಂತ್ರ್ಯವೂ ಮೂಲ ವ್ಯವಸ್ಥೆಯ ಅವಿಭಾಜ್ಯ ಅಂಗವೆಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದ್ದಿದೆ.

ಇದೆಲ್ಲವೂ, ನ್ಯಾಯಾಂಗ ಮತ್ತು ಕಾರ್ಯಾಂಗ/ಶಾಸಕಾಂಗ ಜಂಟಿಯಾಗಿ ಕಾರ್ಯನಿರ್ವಹಿಸದೆ, ತಮ್ಮದೇ ಚೌಕಟ್ಟಿನೊಳಗೆ ಕಾರ್ಯಾಚರಿಸಬೇಕು ಎಂಬುದನ್ನು ಸ್ಪಷ್ಟವಾಗಿ ಹೇಳುತ್ತಿವೆ. ಆದಾಗ್ಯೂ, ಸಂವಿಧಾನಾತ್ಮಕ ಸಂಸ್ಥೆಗಳ ನಡುವೆ ಆಡಳಿತಾತ್ಮಕ ಸಂಪರ್ಕ, ಅಧ್ಯಯನ ಭೇಟಿ ಅಥವಾ ಸೌಜನ್ಯದ ಸಂವಾದಗಳು ನಡೆಯಲು, ಸಂಸದೀಯ ಸಮಿತಿಯು ನಿವೃತ್ತ ನ್ಯಾಯಾಧೀಶರು ಅಥವಾ ಕಾನೂನು ತಜ್ಞರ ಅಭಿಪ್ರಾಯ ಆಲಿಸಲು ಅವಕಾಶವೂ ಇದೆ. ಆದರೂ, ಅಲ್ಲಿ ಸ್ಪಷ್ಟ ಗೆರೆಯೂ ಇರಬೇಕು. ಭವಿಷ್ಯದಲ್ಲಿ ನ್ಯಾಯಾಂಗದ ಮುಂದೆ ಬರಬಹುದಾದ, ಸಿಂಧುತ್ವದ ಬಗ್ಗೆ ಪರಿಶೀಲಿಸಬೇಕಾದ ವಿಚಾರಗಳ ಕುರಿತು ಮೊದಲೇ ನ್ಯಾಯಾಂಗ ಮತ್ತು ಶಾಸಕಾಂಗ ಜೊತೆಗಾಗಿ ಅನೌಪಚಾರಿಕ ಸಭೆ/ಚರ್ಚೆ ನಡೆಸಿಲು ಮುಂದಾದರೆ, ಅದು ನ್ಯಾಯಾಂಗದ ನಿಷ್ಪಕ್ಷಪಾತತೆ ಮತ್ತು ನ್ಯಾಯಾಂಗ-ಶಾಸಕಾಂಗ ನಡುವಿನ ಗಡಿಯನ್ನು ಅಸ್ಪಷ್ಟಗೊಳಿಸುತ್ತದೆ.

ನ್ಯಾಯದ ಮೂಲತತ್ವ ಬಹಳ ಸರಳ: ನ್ಯಾಯ ದೊರೆಯುವುದು ಮಾತ್ರವಲ್ಲ, ನ್ಯಾಯ ದೊರೆಯುತ್ತಿದೆ ಎಂಬ ವಿಶ್ವಾಸವೂ ಸಾರ್ವಜನಿಕರಲ್ಲಿ ಮೂಡಬೇಕು. 1997ರಲ್ಲಿ ಸುಪ್ರೀಂ ಕೋರ್ಟ್ ಅಂಗೀಕರಿಸಿದ ನ್ಯಾಯಾಂಗ ಮೌಲ್ಯಗಳ ಪುನರುಚ್ಚಾರ ಸಂಹಿತೆಯ ಮೊದಲ ತತ್ವ ಹೇಳುವಂತೆ, ನ್ಯಾಯಾಂಗದ ನಿಷ್ಪಕ್ಷಪಾತತೆಯ ಮೇಲಿನ ಸಾರ್ವಜನಿಕ ವಿಶ್ವಾಸವನ್ನು ಕುಂದಿಸುವ ಯಾವುದೇ ವರ್ತನೆಯನ್ನು ನ್ಯಾಯಾಧೀಶರು ತಪ್ಪಿಸಬೇಕು.

ಅದೇ ಸಂಹಿತೆಯ 8ನೇ ತತ್ವ ಇನ್ನೂ ಸ್ಪಷ್ಟವಾಗಿದೆ: ಮುಂದೆ ನ್ಯಾಯಾಂಗ ಪರಿಶೀಲನೆಗೆ ಬರಬಹುದಾದ ವಿಷಯಗಳ ಕುರಿತು ನ್ಯಾಯಾಧೀಶರು ಸಾರ್ವಜನಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಬಾರದು. ಈ ಸ್ವಯಂ ನಿಯಮವನ್ನು ನ್ಯಾಯಾಂಗವೇ ತನಗೆ ತಾನೇ ವಿಧಿಸಿಕೊಂಡಿದೆ.

ಅದೇ ರೀತಿ, ಸಂವಿಧಾನದ 143ನೇ ವಿಧಿಯಡಿ ಸಂಸದೀಯ ಸಮಿತಿಯು ಮಹತ್ವದ ಕಾನೂನು ರೂಪಿಸುವಾಗ, ಸುಪ್ರೀಂ ಕೋರ್ಟ್‌ನ ಸಲಹೆ ಪಡಯಬೇಕಿದ್ದರೆ, ರಾಷ್ಟ್ರಪತಿಗೆ ಅದನ್ನು ತಿಳಿಸಿ, ಅವರಿಂದ ಅನುಮತಿ ಪಡೆದು, ನ್ಯಾಯಾಂಗದ ಜೊತೆಗೆ ಮುಕ್ತ ಚರ್ಚೆ ನಡೆಸಲು ಅವಕಾಶ ನೀಡಲಾಗಿದೆ. ಇಂತಹ ಪಾರದರ್ಶಕ ಸಾಂವಿಧಾನಿಕ ಮಾರ್ಗವಿರುವಾಗ, ಸಂಸದೀಯ ಸಮಿತಿಯು ಮುಚ್ಚಿದ ಬಾಗಿಲಲ್ಲಿ ಅನೌಪಚಾರಿಕ ಮಾತುಕತೆಗೆ ಮುಂದಾಗಿದ್ದು ಅಸಂವಿಧಾನಿಕ ಕ್ರಮ/ಧೋರಣೆ.

ಆದ್ದರಿಂದಲೇ, ಒಂದು ದೇಶ - ಒಂದು ಚುನಾವಣೆ ವಿಚಾರ ಕುರಿತಾದ ಸಂಸದೀಯ ಸಮಿತಿ ಮತ್ತು ನ್ಯಾಯಾಂಗ ನಡುವಿನ ಚರ್ಚೆಗಳ ಕುರಿತು ಪ್ರಶ್ನೆಗಳು ಎದ್ದಿದ್ದವು. ಇದೀಗ, ನ್ಯಾಯಾಲಯವು ಸಭೆಯನ್ನು ರದ್ದುಗೊಳಿಸಿದೆ. ಆದರೆ, ಅದಕ್ಕೂ ಮುನ್ನ ಸಂಸದೀಯ ಸಮಿತಿ ನೀಡಿದ ಕಾರಣಗಳು ವಿರೋಧಾಭಾಸವಾಗಿದ್ದವು. ಆರಂಭದಲ್ಲಿ, ದಿನಾಂಕ ಹೊಂದಾಣಿಕೆಯಾಗಲಿಲ್ಲ ಎಂದೂ, ನಂತರ ಇದು ಕೇವಲ ಗ್ರಂಥಾಲಯ ವೀಕ್ಷಣೆಯ ಭೇಟಿ ಎಂದೂ ಸಮಿತಿ ಸುಳ್ಳು ಸಮರ್ಥನೆಗಳನ್ನು ನೀಡಿತು. ಆದರೆ, ಕಾರ್ಯಕ್ರಮದ ಅಧಿಕೃತ ಪಟ್ಟಿಯಲ್ಲಿ ಸಮಕಾಲೀನ ಚುನಾವಣೆ ಕುರಿತ ಚರ್ಚೆ ಎಂದು ಉಲ್ಲೇಖವಾಗಿತ್ತು.

ಒಂದು ದೇಶ-ಒಂದು ಚುನಾವಣೆ ಮಸೂದೆಯು ಸಣ್ಣ ತಿದ್ದುಪಡಿಯಲ್ಲ. ಪ್ರಸ್ತಾವಿತ 129ನೇ ತಿದ್ದುಪಡಿಯು ಹೊಸ 82 ವಿಧಿಯನ್ನು ಸೇರಿಸುವ ಮೂಲಕ, ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆ ಚುನಾವಣೆಗಳನ್ನು ಒಂದೇ ಸಮಯಕ್ಕೆ ನಿಗದಿ ಮಾಡುವ ದೊಡ್ಡ ಸಂಚು ಹೊಂದಿವೆ. ಇದರಿಂದಾಗಿ, ಅವಧಿಗೂ ಮುನ್ನ ಸದನ ವಿಸರ್ಜನೆ, ವಿಧಾನಸಭೆಗಳ ಅವಧಿ, ಜನಾದೇಶದ ಸ್ವರೂಪ, ರಾಜ್ಯಗಳ ಸ್ವಾಯತ್ತತೆ, ಚುನಾವಣಾ ಆಯೋಗದ ಅಧಿಕಾರ ಹಾಗೂ ಮತ್ತು ಒಕ್ಕೂಟ ವ್ಯವಸ್ಥೆಯ ಮೂಲ ತತ್ವದ ಕುರಿತು ಗಂಭೀರ ಪ್ರಶ್ನೆಗಳು ಮತ್ತು ಚರ್ಚೆಗಳು ಮುನ್ನೆಲೆಗೆ ಬರುತ್ತವೆ. ಸಾಂವಿಧಾನಿಕ ಸಿಂಧುತ್ವದ ಪ್ರಶ್ನೆಗಳೂ ಏಳುತ್ತವೆ. ಇಂತಹ ಮಸೂದೆಯ ಕುರಿತು ತೀರ್ಪು ನೀಡಬೇಕಾದವರ ಜೊತೆ ಅದನ್ನು ರೂಪಿಸುತ್ತಿರುವ ಸಮಿತಿ ಮುಂಚೆಯೇ ಸಂವಾದ ನಡೆಸುವುದು ಅಪಾಯಕಾರಿ.

ಇದೀಗ, ಸುಪ್ರೀಂ ಕೋರ್ಟ್ ಈ ಚರ್ಚೆಯಿಂದ ಹಿಂದೆ ಸರಿದಿದೆ. ಆದಾಗ್ಯೂ, ಈ ಬೆಳವಣಿಗೆಯಿಂದ ಸರ್ಕಾರವೂ ಸಂಸತ್ತೂ ಒಂದು ವಿಚಾರವನ್ನು ಅರಿತುಕೊಳ್ಳಬೇಕು. ಸರ್ಕಾರ/ಸಂಸದೀಯ ಸಮಿತಿಯು ನ್ಯಾಯಾಂಗದ ಜೊತೆ ಅತಿಯಾದ ಆಡಳಿತಾತ್ಮಕ ಆತ್ಮೀಯತೆ, ಪೂರ್ವಭಾವಿ ಸಂವಾದ, ಭವಿಷ್ಯದ ವಿವಾದಗಳ ಕುರಿತು ಅನೌಪಚಾರಿಕ ಮಾತುಕತೆ ನಡೆಸುವುದು ಸಾರ್ವಜನಿಕ ಅನುಮಾನ ಹುಟ್ಟುಹಾಕುತ್ತವೆ. ಇದು, ನ್ಯಾಯಾಂಗದ ಮೇಲಿನ ಜನಾಭಿಪ್ರಾಯ ಮತ್ತು ವಿಶ್ವಾಸವನ್ನು ಕುಂದಿಸುತ್ತವೆ.

ಸಂಸತ್ತಿಗೆ ಕಾನೂನು ಮಾಡುವ ಹಕ್ಕಿದೆ. ಸರ್ಕಾರಕ್ಕೆ ಅದರ ಪರವಾಗಿ ವಾದಿಸುವ ಸ್ವಾತಂತ್ರ್ಯವಿದೆ. ವಿರೋಧ ಪಕ್ಷಗಳಿಗೆ ಅದನ್ನು ಪರಾಮರ್ಶಿಸುವ ಅಧಿಕಾರವಿದೆ. ಆದರೆ, ಆ ಕಾನೂನು ಸಂವಿಧಾನದ ಗಡಿ ದಾಟಿದೆಯೇ-ಇಲ್ಲವೇ ಎಂಬುದನ್ನು ಅಂತಿಮವಾಗಿ ತೀರ್ಮಾನಿಸುವ ಹಕ್ಕು ನ್ಯಾಯಾಂಗಕ್ಕಿದೆ. ಆ ತೀರ್ಪು ನೀಡುವ ನ್ಯಾಯಾಧೀಶರಿಗೆ ಮಸೂದೆಯ ಕುರಿತು ಅನೌಪಚಾರಿಕವಾಗಿ ಪೂರ್ವಭಾವಿಯಾಗಿಯೇ ಮಾಹಿತಿ ನೀಡುವ ಅಥವಾ ಚರ್ಚಿಸುವ ಸಂಸ್ಕೃತಿ ಬೆಳೆದರೆ, ಅದು ಪ್ರಜಾಪ್ರಭುತ್ವದ ಮೂಲ ಸ್ತಂಭವನ್ನು ಅಲುಗಾಡಿಸುತ್ತದೆ.


ಆದ್ದರಿಂದ, ಒಂದು ದೇಶ - ಒಂದು ಚುನಾವಣೆ ಕುರಿತಾದ ಈ ಅನೌಪಚಾರಿಕ ಸಭೆ ರದ್ದಾದದ್ದು ಮತ್ತು ಸುಪ್ರೀಂ ಕೋರ್ಟ್ ತನ್ನ ಗಡಿಯನ್ನು ತಾನೇ ನೆನಪಿಸಿಕೊಂಡು ಹಿಂದಕ್ಕೆ ಸರಿದದ್ದು, ಸ್ವಾಗತಾರ್ಹ ಬೆಳವಣಿಗೆ.

ಸ್ವತಂತ್ರ ಸಾಂವಿಧಾನಿಕ ಸಂಸ್ಥೆಗಳ ಮೇಲಿನ ನಂಬಿಕೆಯನ್ನು ಕಸಿದುಕೊಳ್ಳುತ್ತಿರುವ ಚುನಾವಣಾ ಆಯೋಗ ಮತ್ತು ಸುಪ್ರೀಂ ಕೋರ್ಟ್

ನ್ಯಾಯಾಲಯ ಮತ್ತು ಚುನಾವಣಾ ಆಯೋಗಗಳ 'ಸ್ವತಂತ್ರತೆ' ಎಂಬ ಮುಖವಾಡವೇ ಈಗ ಸರ್ಕಾರಕ್ಕೆ ರಕ್ಷಣಾ ಕವಚವಾಗಿ ಕೆಲಸ ಮಾಡುತ್ತಿದೆ. ಹೀಗಾಗಿ ಇವತ್ತು ವಿರೋಧ ಪಕ್ಷಗಳ ಆಕ್ರೋಶವೆಲ್ಲವೂ ಸಾಂವಿಧಾನಿಕ ಸಂಸ್ಥೆಗಳ ಕಡೆಗೆ ತಿರುಗಿದೆ. ಸರ್ಕಾರ ತೀರಾ ಸಲೀಸಾಗಿ ನುಣುಚಿಕೊಳ್ಳಬಹುದಾದ ವಿಚಿತ್ರ ಸನ್ನಿವೇಶ ಸೃಷ್ಟಿಯಾಗಿದೆ.

ಭಾರತೀಯ ಸಾಂವಿಧಾನಿಕ ಇತಿಹಾಸದಲ್ಲೇ ಇದೊಂದು ತೀರಾ ಅಪರೂಪದ ನಿದರ್ಶನ. ದೇಶದ ಎರಡು ಅತ್ಯುನ್ನತ ಸಂಸ್ಥೆಗಳಾದ ಭಾರತದ ಸುಪ್ರೀಂ ಕೋರ್ಟ್ ಮತ್ತು ಚುನಾವಣಾ ಆಯೋಗಗಳು ತಮ್ಮ ಸಾಂವಿಧಾನಿಕ ಹೊಣೆಗಾರಿಕೆಯನ್ನು ಸಂಪೂರ್ಣ ನಿರ್ಲಕ್ಷಿಸಿ ಪರಸ್ಪರ ಒಂದನೊಂದು ಬೆಂಬಲಿಸಿಕೊಂಡು ನಿಂತಿವೆ. ನಾಗರಿಕರ ಮೇಲೆ ಆಡಳಿತಾತ್ಮಕ ಕ್ರೌರ್ಯವನ್ನು ಹೇರುತ್ತಾ ಅವರ ಮತದಾನದ ಹಕ್ಕನ್ನೇ ಕಸಿದುಕೊಳ್ಳುವ ಪ್ರಕ್ರಿಯೆಯಲ್ಲಿ ಪರಸ್ಪರ ಕೈಜೋಡಿಸಿವೆ. ಈಗ ಚುನಾವಣಾ ಆಯೋಗ ಜಾರಿಗೊಳಿಸುತ್ತಿರುವ ವಿಶೇಷ ಪರಿಷ್ಕರಣೆ () ಪ್ರಕ್ರಿಯೆಯನ್ನು ರೂಪಿಸಿದ ಮತ್ತು ಜಾರಿಗೆ ತಂದ ರೀತಿ ಎಷ್ಟೊಂದು ಕಳಪೆಯಾಗಿತ್ತೆಂದರೆ, ಜನಸಾಮಾನ್ಯರು ಕಂಗಾಲಾಗಿ ಹೋಗಿದ್ದಾರೆ. ಇದಕ್ಕಿಂತ ಆಘಾತಕಾರಿ ಸಂಗತಿಯೆಂದರೆ, ತಪ್ಪನ್ನು ಸರಿಪಡಿಸಿಕೊಳ್ಳಲು ಅವಕಾಶಗಳಿದ್ದಾಗಲೆಲ್ಲ ಈ ಸಂಸ್ಥೆಗಳು ಪ್ರಾಮಾಣಿಕವಾಗಿ ನಡೆದುಕೊಳ್ಳದೆ, ಸುಳ್ಳು ಸಮರ್ಥನೆಗಳ ಮೂಲಕ ಜನರನ್ನು ದಾರಿತಪ್ಪಿಸಿವೆ. ಪ್ರಕ್ರಿಯೆಯ ನ್ಯಾಯಸಮ್ಮತತೆ ಮತ್ತು ಪಾರದರ್ಶಕತೆಯ ಬಗ್ಗೆ ವ್ಯಕ್ತವಾದ ಮೂಲಭೂತ ಕಾಳಜಿಗಳನ್ನು ಪರಿಹರಿಸುವ ಗೋಜಿಗೆ ಅವು ಹೋಗಲೇ ಇಲ್ಲ. ಪತ್ರಕರ್ತರಾದ ರಿತಿಕಾ ಚೋಪ್ರಾ ಮತ್ತು ದಾಮಿನಿ ನಾಥ್ ಅವರು ಪತ್ರಿಕೆಯಲ್ಲಿ ಬರೆದ ತನಿಖಾ ವರದಿಗಳು ಆಯೋಗದ ಕಾರ್ಯವೈಖರಿಯ ಬಗ್ಗೆ ಮಹತ್ವದ ಪ್ರಶ್ನೆಗಳನ್ನು ಎತ್ತಿದವು. ಅವು ಕೇವಲ ನಿಯಮಾವಳಿಗಳ ಪ್ರಶ್ನೆಯಾಗಿರಲಿಲ್ಲ. ಅತ್ಯಂತ ಗಂಭೀರವಾದ ಸಾಂವಿಧಾನಿಕ ವಿಷಯಗಳಾಗಿದ್ದವು. ಸಾಫ್ಟ್‌ವೇರ್ ನಿಯಮಾವಳಿಗಳು ಸೇರಿದಂತೆ ಇಡೀ ಪ್ರಕ್ರಿಯೆ ಸ್ವಲ್ಪವೂ ಪಾರದರ್ಶಕವಾಗಿರಲಿಲ್ಲ. ತಾನು ಅರ್ಹ ಮತದಾರ ಎಂದು ಸಾಬೀತುಪಡಿಸುವ ಸಂಪೂರ್ಣ ಹೊರೆಯನ್ನು ಅಸಹಾಯಕ ನಾಗರಿಕರ ಹೆಗಲಿಗೇ ಹೊರಿಸಲಾಗಿದೆ. ಇತ್ತೀಚಿನ ವಿದ್ಯಮಾನಗಳನ್ನು ನೋಡಿದರೆ ಯಾವುದೇ ಸಂಗತಿಯೂ ನಮಗೆ ಆಶ್ಚರ್ಯವಾಗುವುದಿಲ್ಲ. ಆದಾಗ್ಯೂ, ಪಟ್ಟಿಗೆ ಸೇರ್ಪಡೆಗೊಳ್ಳಲು ಎಲ್ಲ ಅರ್ಹತೆಯೂ ಇದ್ದ ಬಂಗಾಳದ 16 ಲಕ್ಷ ಮತದಾರರ ಹೆಸರನ್ನು ಕೈಬಿಡಲು ಸಾಕ್ಷಾತ್ ಚುನಾವಣಾ ಆಯೋಗವೇ ಸಾರಾಸಗಟಾಗಿ ಕೋರ್ಟ್ ಮೆಟ್ಟಲೇರಿತು ಎಂಬುದು ಅಕ್ಷರಶಃ ದಿಗ್ಭ್ರಮೆ ಮೂಡಿಸುವ ಸಂಗತಿ.

ಈ ಎಸ್‌ಐಆರ್ ಅವಾಂತರಕ್ಕೆ ಸುಪ್ರೀಂ ಕೋರ್ಟ್ ಮತ್ತು ಚುನಾವಣಾ ಆಯೋಗಗಳೆರಡೂ ಜಂಟಿಯಾಗಿ ಹೊಣೆಯಾಗಿವೆ. ಮತದಾರರ ಪಟ್ಟಿಯ ಪಾವಿತ್ರ್ಯತೆಯನ್ನು ಕಾಪಾಡುವ ಸಂಪೂರ್ಣ ಅಧಿಕಾರ ಚುನಾವಣಾ ಆಯೋಗಕ್ಕಿದೆ. ಚುನಾವಣಾ ಆಯುಕ್ತರನ್ನು ನೇರವಾಗಿ ಕೆಲಸದಿಂದ ತೆಗೆದುಹಾಕಲು ಸಾಧ್ಯವಿಲ್ಲ. ಅದಕ್ಕಾಗಿ ಸಂಸತ್ತಿನಲ್ಲಿ ವಿಶೇಷ ನಿರ್ಣಯ ತೆಗೆದುಕೊಂಡು ಅವರನ್ನು ಪದಚ್ಯುತಿಗೊಳಿಸಬಹುದು. ಅಂತಹ ಬಲವಾದ ರಕ್ಷಣೆಯನ್ನು ಅವರಿಗೆ ಸಂವಿಧಾನ ನೀಡಿದೆ. ಹೀಗಾಗಿ, ಆಯೋಗವನ್ನು ಪ್ರಶ್ನಿಸಿ ನಿಯಂತ್ರಣದಲ್ಲಿಡಲು ಉಳಿದಿರುವ ಏಕೈಕ ದಾರಿ ಸುಪ್ರೀಂ ಕೋರ್ಟ್ ಮಾತ್ರ. ಆಯೋಗದ ಅಧಿಕಾರವನ್ನು ಕಸಿದುಕೊಳ್ಳದೆ, ಆ ಅಧಿಕಾರ ದುರುಪಯೋಗವಾಗದಂತೆ ಬಲವಾದ ನಿಯಮಗಳು ಹಾಗೂ ರಕ್ಷಣಾತ್ಮಕ ಕವಚಗಳನ್ನು ನ್ಯಾಯಾಲಯ ರೂಪಿಸಬೇಕಿತ್ತು. ಆದರೆ ಕೋರ್ಟ್ ಮಧ್ಯಪ್ರವೇಶದಿಂದಲೂ ಈಗ ಜನರಿಗೆ ಯಾವುದೇ ನಿಜವಾದ ರಕ್ಷಣೆ ಸಿಗಲಿಲ್ಲ; ಬದಲಿಗೆ, ಆ ಗೊಂದಲದ ಪ್ರಕ್ರಿಯೆ ಸರಿಯಾಗಿದೆ ಎಂದು ನ್ಯಾಯಾಲಯವೇ ಒಪ್ಪಿಗೆ ಕೊಟ್ಟು ಊರ್ಜಿತಗೊಳಿಸಿದಂತಾಯಿತು. ಇದಕ್ಕಿಂತ ಕೆಟ್ಟ ಸಂಗತಿಯೆಂದರೆ, ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರು ಪಟ್ಟಿಯಿಂದ ಹೊರಗುಳಿದವರು ಮುಂದಿನ ಚುನಾವಣೆಯಲ್ಲಿ ಮತ ಚಲಾಯಿಸಿದರಾಯಿತು ಎಂಬ ಬೇಜವಾಬ್ದಾರಿ ಹೇಳಿಕೆಯನ್ನು ನೀಡಿದರು. ಪಶ್ಚಿಮ ಬಂಗಾಳದ ರೆಜಿನಗರ ಮತ್ತು ನಂದಿಗ್ರಾಮ ಉಪಚುನಾವಣೆಗಳಿಗೆ ಮುನ್ನ ಬಾಕಿ ಉಳಿದಿರುವ ಮೇಲ್ಮನವಿಗಳ ಅರ್ಜಿಯನ್ನು ತುರ್ತಾಗಿ ವಿಚಾರಣೆ ನಡೆಸಲು ನಿರಾಕರಿಸಿದ ಮುಖ್ಯ ನ್ಯಾಯಮೂರ್ತಿಗಳ ನಿಲುವಿನಲ್ಲೂ



ಇದೇ ಉಡಾಫೆಯ ಧೋರಣೆಯೇ ಇತ್ತು. ಮತದಾನದ ಹಕ್ಕನ್ನು ಎಷ್ಟು ಹಗುರವಾಗಿ ಪರಿಗಣಿಸಬಹುದು ಎಂಬ ಆಘಾತಕಾರಿ ಸಂದೇಶವನ್ನು ಇಬ್ಬರೂ ರವಾನಿಸಿದರು. ಕೊನೆಗೆ, ನ್ಯಾಯಾಧೀಶರುಗಳು ಮತ್ತು ಆಯೋಗ ತಮಗೆ ತೋಚಿದಂತೆ ರೂಪಿಸಿಕೊಂಡ ನಿಯಮಗಳೇ ಜನರ ಮತದಾನದ ಹಕ್ಕನ್ನು ನಿರ್ಧರಿಸುವಂತಾಯಿತು. ಇಲ್ಲಿ ಎಸ್‌ಐಆರ್‌ನ ತಾಂತ್ರಿಕ ವಿವರಗಳಿಗಿಂತ ದೊಡ್ಡ ದುರಂತವೆಂದರೆ, ನಮ್ಮನ್ನು ಯಾರೂ ಪ್ರಶ್ನಿಸಲಾರರು ಎಂಬ ಹೊಣೆಗೇಡಿತನ ಮತ್ತು ದುರಹಂಕಾರವೇ ಈ ಸಂಸ್ಥೆಗಳ ಕಾಯಂ ಸ್ವಭಾವವಾಗಿಬಿಟ್ಟಿರುವುದು.

ಈ ಸಾಂವಿಧಾನಿಕ ಸಂಸ್ಥೆಗಳಿಗೆ ತಮ್ಮ ಸ್ವಂತ ಹೊಣೆಗಾರಿಕೆಯ ಅರಿವೇ ಇಲ್ಲದಿರುವುದು ಗಾಬರಿಹುಟ್ಟಿಸುತ್ತದೆ. ಜಿರಳೆಗಳು ಎಂಬ ತಮ್ಮ ಹೇಳಿಕೆಯಿಂದ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದ್ದ ಮುಖ್ಯ ನ್ಯಾಯಮೂರ್ತಿಗಳಿಗೆ, ಪ್ರಜೆಗಳನ್ನು ಸ್ವತಂತ್ರ ಮತ್ತು ಸಮಾನ ನಾಗರಿಕರೆಂದು ಕಾಣುವುದು ಎಂದರೆ ಏನೆಂಬ ಕನಿಷ್ಠ ಪ್ರಜ್ಞೆಯಾದರೂ ಇರಬೇಕಿತ್ತಲ್ಲವೇ? ಜನ ಪ್ರಶ್ನಿಸಿದಾಗ ಅದನ್ನು ತನ್ನ ಅಧಿಕಾರದ ಮೇಲಿನ ಹಲ್ಲೆಯಾಗಿ ಭಾವಿಸುವ ಸರ್ಕಾರದ ಧೋರಣೆಯನ್ನು ನಾವು ಅರ್ಥಮಾಡಿಕೊಳ್ಳಬಹುದು; ಏಕೆಂದರೆ ಸರ್ಕಾರಗಳು ನಡೆದುಕೊಳ್ಳುವುದೇ ಹಾಗೆ. ಆ ಸರ್ಕಾರವು ಕನಿಷ್ಠ ಪಕ್ಷ ಮುಂದೊಂದು ದಿನ ಚುನಾವಣೆಯಲ್ಲಿ ಜನರ ತೀರ್ಪನ್ನು ಎದುರಿಸಬೇಕಾಗುತ್ತದೆ. ಆದರೆ ನಿರಂಕುಶ ಅಧಿಕಾರ ಮತ್ತು ಹಕ್ಕುಚ್ಯುತಿಯಿಂದ ನಾಗರಿಕರನ್ನು ರಕ್ಷಿಸುವ ಜವಾಬ್ದಾರಿ ಹೊತ್ತ ಸಾಂವಿಧಾನಿಕ ಅಧಿಕಾರಿಗಳೇ ವ್ಯವಸ್ಥಿತವಾಗಿ ಹೀಗೆ ವರ್ತಿಸುವುದು ಅತ್ಯಂತ ಕೆಟ್ಟ ವಿವೇಕಹೀನತೆಯ ಸಂಕೇತವಾಗಿದೆ. ಇಂತಹ ವ್ಯವಸ್ಥೆಯಿಂದ ರೂಪುಗೊಳ್ಳುವ ಸಾಂವಿಧಾನಿಕ ಸುವ್ಯವಸ್ಥೆಯನ್ನು ನಾವು ಏನೆಂದು ಕರೆಯಬೇಕು? ನಾಚಿಕೆಯಿಲ್ಲದ ಸಂವಿಧಾನ ಎನ್ನಬೇಕೇ ಅಥವಾ ಯಾರೂ ಶಿಕ್ಷಿಸಲಾಗದ ಹೊಣೆಗೇಡಿತನದ ಸಂವಿಧಾನ ಎನ್ನಬೇಕೇ? ಈ ಪರಿಸ್ಥಿತಿ ಪ್ರಾಚೀನ ರೋಮ್‌ನ ಇತಿಹಾಸಕಾರರಿಗೆ ಚಿರಪರಿಚಿತವಾಗಿತ್ತು. ಸಾಂವಿಧಾನಿಕ ಹುದ್ದೆಗಳನ್ನು ಅಧಿಕೃತವಾಗಿ ರದ್ದುಗೊಳಿಸದೆಯೇ, ಅವುಗಳನ್ನು ಹಾಗೇ ಉಳಿಸಿಕೊಂಡು ಅದರ ಚೌಕಟ್ಟಿನಲ್ಲೇ ಸ್ವೇಚ್ಛಾಚಾರದ ಸರ್ವಾಧಿಕಾರಿ ಶಕ್ತಿಗಳು ಹೇಗೆ ಬೇರೂರಬಲ್ಲವು ಎಂಬುದಕ್ಕೆ ಇದು ಪ್ರತ್ಯಕ್ಷ ನಿದರ್ಶನ.

ಇಲ್ಲಿ ಸಂಸ್ಥೆಗಳ ಒಳಗೆ ನಡೆಯುತ್ತಿರುವ ಇನ್ನೊಂದು ಆತಂಕಕಾರಿ ಸಂಗತಿಯಿದೆ. ಚುನಾವಣಾ ಆಯೋಗದ ಆಂತರಿಕ ಬೆಳವಣಿಗೆಗಳು ಸರ್ಕಾರಕ್ಕೆ ಎಷ್ಟರಮಟ್ಟಿಗೆ ತಿಳಿದಿದ್ದವು ಎಂಬ ಪ್ರಶ್ನೆ ಖಂಡಿತ ನ್ಯಾಯಸಮ್ಮತವಾದದ್ದು. ಇವೆಲ್ಲ ಕಾನೂನಿನ ಪ್ರಕಾರವೇ ನಡೆಯುತ್ತಿವೆ ಎಂದು ಸರ್ಕಾರ ನಂಬಿತ್ತೇ ಎಂಬ ಸಂಶಯವೂ ಮೂಡುತ್ತದೆ. ಆದರೆ ಸ್ವತಃ ಸುಪ್ರೀಂ ಕೋರ್ಟ್ ಮತ್ತು ಚುನಾವಣಾ ಆಯೋಗಗಳೇ ಇಷ್ಟು ಬೇಜವಾಬ್ದಾರಿಯಾಗಿ ನಡೆದುಕೊಂಡಿವೆ. ಅವುಗಳಿಗೆ ಸಂವಿಧಾನದ ಕನಿಷ್ಠ ಅರಿವೂ ಇದ್ದಂತೆ ತೋರುತ್ತಿಲ್ಲ. ಹೀಗಿರುವಾಗ, ಎಲ್ಲ ತಪ್ಪುಗಳ ಜವಾಬ್ದಾರಿಯನ್ನು ಸರ್ಕಾರದ ಮೇಲೆ ಮಾತ್ರ ಹೊರಿಸುವುದಕ್ಕೆ ಸಾಧ್ಯವೇ?

ಆಯೋಗದ ನಡೆಗಳು ಸರ್ಕಾರದ ಆಣತಿಯಂತೆಯೇ ನಡೆಯುತ್ತಿವೆ ಎಂದು ವಾದಿಸಬಹುದು. ವಿಪರ್ಯಾಸವೆಂದರೆ, ನ್ಯಾಯಾಲಯ ಮತ್ತು ಚುನಾವಣಾ ಆಯೋಗಗಳ ಸ್ವತಂತ್ರತೆ ಎಂಬ ಮುಖವಾಡವೇ ಈಗ ಸರ್ಕಾರಕ್ಕೆ ರಕ್ಷಣಾ ಕವಚವಾಗಿ ಕೆಲಸಮಾಡುತ್ತಿದೆ. ಹೀಗಾಗಿ ಇವತ್ತು ವಿರೋಧ ಪಕ್ಷಗಳ ಆಕ್ರೋಶವೆಲ್ಲವೂ ಸಾಂವಿಧಾನಿಕ ಸಂಸ್ಥೆಗಳ ಕಡೆಗೆ ತಿರುಗಿದೆ. ಸರ್ಕಾರ ತೀರಾ ಸಲೀಸಾಗಿ ನುಣುಚಿಕೊಳ್ಳಬಹುದಾದ ವಿಚಿತ್ರ ಸನ್ನಿವೇಶ ಸೃಷ್ಟಿಯಾಗಿದೆ.

ಈ ಸಾಂಸ್ಥಿಕ ಅವನತಿಯ ಒಳಾರ್ಥವನ್ನು ಸೂಕ್ಷ್ಮವಾಗಿ ಗಮನಿಸಬೇಕು. ವ್ಯವಸ್ಥೆಯ ಕೀವು ಕೇವಲ ರಾಜಕಾರಣದಲ್ಲಷ್ಟೇ ಶುರುವಾಗಿ ಅಲ್ಲಿಗೇ ಮುಗಿಯುವುದಿಲ್ಲ; ಅದು ಬಹುಶಃ ಒಂದು ಇಡೀ ತಲೆಮಾರಿನ ಮತದಾರರಲ್ಲೂ ಹಾಗೂ ಸರ್ಕಾರಿ ಅಧಿಕಾರಿ ವರ್ಗದಲ್ಲೂ ಆಳವಾಗಿ ಬೇರೂರಿದೆ ಎಂಬುದನ್ನು ಇದು ತೋರಿಸುತ್ತದೆ. ಚುನಾವಣಾ ಆಯೋಗದ ನೇಮಕಾತಿ ಪ್ರಕ್ರಿಯೆಯಲ್ಲಿ ಕಾರ್ಯಾಂಗಕ್ಕೆ ಅತಿಯಾದ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ಈಗ ತಡವಾಗಿ ಮತ್ತೆ ಆಕ್ಷೇಪವೆತ್ತಿದೆ. ಆದರೆ ಕೇವಲ ಕಾಗದದ ಮೇಲಿನ ನೇಮಕಾತಿ ನಿಯಮಗಳು ಆ ಹುದ್ದೆಗೆ ಬರುವ ವ್ಯಕ್ತಿಗಳ ಗುಣಮಟ್ಟವನ್ನಾಗಲಿ ಅಥವಾ ಆ ಉನ್ನತ ಸ್ಥಾನದಲ್ಲಿ ಅವರ ನಡತೆಯನ್ನಾಗಲಿ ಖಾತರಿಪಡಿಸುವುದಿಲ್ಲ. ಇದಕ್ಕೆ ಸ್ವತಃ ಸುಪ್ರೀಂ ಕೋರ್ಟ್‌ನ ವರ್ತನೆಯೇ ಜೀವಂತ ನಿದರ್ಶನವಾಗಿದೆ. ನೀತಿ ನಿಯಮಗಳು ಎಂದಿಗೂ ಸದಾಚಾರಕ್ಕೆ ಪರ್ಯಾಯವಾಗಲಾರವು, ಅಥವಾ ನೀತಿನಿಯಮಗಳಿಗೆ ಸದಾಚಾರವನ್ನು ಕೃತಕವಾಗಿ ಸೃಷ್ಟಿಸುವುದಕ್ಕೂ ಸಾಧ್ಯವಿಲ್ಲ.

ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ಜನರಲ್ಲಿ ಅಪನಂಬಿಕೆ ಹುಟ್ಟಿಸುವುದೇ ಬಿಜೆಪಿಯ ದೀರ್ಘಕಾಲೀನ ರಾಜಕೀಯ ಕಾರ್ಯತಂತ್ರವಾಗಿದೆ. ಸಾಂವಿಧಾನಿಕ ಅಧಿಕಾರಿಗಳ ಮೇಲಿನ ಅನುಮಾನಗಳನ್ನೇ ಬಂಡವಾಳ ಮಾಡಿಕೊಂಡು ಅದು ರಾಜಕೀಯವಾಗಿ ಬೆಳೆಯುತ್ತದೆ. ಆದರೆ ಚುನಾವಣಾ ಆಯೋಗ ಮತ್ತು ಸುಪ್ರೀಂ ಕೋರ್ಟ್ ತಮ್ಮ ನಡವಳಿಕೆಯ ಮೂಲಕ ಬಿಜೆಪಿಯ ಈ ತಂತ್ರಕ್ಕೆ ಇನ್ನಷ್ಟು ಪುಷ್ಟಿ ನೀಡುತ್ತಿದೆ. ಒಟ್ಟಾರೆಯಾಗಿ ಸ್ವತಂತ್ರ ಸಂಸ್ಥೆಗಳನ್ನು ನಂಬುವುದಕ್ಕೆ ಸಾಧ್ಯವಿಲ್ಲ ಎನ್ನುವಂತಹ ವಾತಾವರಣ ಸೃಷ್ಟಿಸಲಾಗಿದೆ. ಈ ದುಸ್ಥಿತಿಯನ್ನು ಬದಲಾಯಿಸಲು ಈಗ ಭಗೀರಥ ಪ್ರಯತ್ನವೇ ಬೇಕಿದೆ. ತಮ್ಮ ನಡವಳಿಕೆಯ ಬಗ್ಗೆ ಸಾರ್ವಜನಿಕವಾಗಿ ಅನುಮಾನಗಳು ವ್ಯಕ್ತವಾದಾಗ ಚುನಾವಣಾ ಆಯೋಗ ಹೊರಡಿಸಿದ ಪತ್ರಿಕಾ ಪ್ರಕಟಣೆಗಳು ಕಾಟಾಚಾರದ ಉತ್ತರಗಳಾಗಿದ್ದವು. ಅವುಗಳಲ್ಲಿ ಪ್ರಕ್ರಿಯೆಯ ಲೋಪಗಳ ಅರೆಬರೆ ಒಪ್ಪಿಗೆಯೂ ಇತ್ತು, ತೊಂದರೆಗೊಳಗಾದ ಮತದಾರರಿಗೆ ನೆರವಾಗುವ ಆಶ್ವಾಸನೆಯೂ ಅದರಲ್ಲಿತ್ತು. ಮಾಧ್ಯಮಗಳು ಹಾಗೂ ವಿಪಕ್ಷಗಳು ಎಷ್ಟೇ ಕೂಗಿಕೊಂಡರೂ, ಮುಖ್ಯವಾಗಿ ಹಕ್ಕಿನಿಂದ ವಂಚಿತರಾದ ಮತದಾರರ ಸಂಘಟಿತ ಆಕ್ರೋಶ ಕಾಣಿಸುತ್ತಿಲ್ಲ. ಅದು ತೀರಾ ನಿರ್ಣಾಯಕವಾದ ಧ್ವನಿ. ಬಹುಷಃ ಪರಿಷ್ಕರಣೆಯ ಕಸರತ್ತು ಇನ್ನೂ ಪೂರ್ಣವಾಗದಿರುವುದು ಮತ್ತು ಕಾನೂನು ಪ್ರಕ್ರಿಯೆಗಳು ಮುಂದುವರಿಯುತ್ತಿರುವುದು ಇದಕ್ಕೆ ಭಾಗಶಃ ಕಾರಣವಿರಬಹುದು.

ಆದರೆ ಮತದಾನದ ಹಕ್ಕಿನಿಂದ ವಂಚಿತರಾದ ಕೋಟ್ಯಂತರ ಜನ ಸಾರ್ವಜನಿಕ ಚರ್ಚೆಯ ಮುಂಚೂಣಿಗೆ ಬಂದು ಧ್ವನಿ ಎತ್ತಬೇಕು. ಅವರು ಹಿಂದೆಯೇ ಉಳಿದಿದ್ದಾರೆ. ಈ ಲಕ್ಷಾಂತರ ಮತದಾರರನ್ನು ಕೇವಲ ಅಂಕಿಅಂಶವಾಗಿ ನೋಡದೆ ಒಂದು ಪ್ರಬಲ ರಾಜಕೀಯ ಶಕ್ತಿಯನ್ನಾಗಿ ಒಗ್ಗೂಡಿಸಬೇಕು. ಅದು ಸುಲಭದ ವಿಷಯವಲ್ಲ. ಅದರಿಂದಾಗಿಯೇ, ಈ ಮಹಾದ್ರೋಹದ ವಿರುದ್ಧ ಸಿಡಿಯಬೇಕಿದ್ದ ಜನಾಕ್ರೋಶಕ್ಕೆ ಬರಬೇಕಾದ ಮೊಣಚು ಬಂದಿಲ್ಲ. ಮುಖ್ಯ ಚುನಾವಣಾ ಆಯುಕ್ತರು ರಾಜೀನಾಮೆ ನೀಡುವುದು ಬಹುಶಃ ಉತ್ತರದಾಯಿತ್ವದ ಒಂದು ಸಾಂಕೇತಿಕ ಸಂದೇಶವಾಗಬಹುದು. ಸುಪ್ರೀಂ ಕೋರ್ಟ್ ತಡವಾಗಿಯಾದರೂ ಈ ಪರಿಷ್ಕರಣಾ ಪ್ರಕ್ರಿಯೆಯ ಘನತೆಯನ್ನು ಮರುಸ್ಥಾಪಿಸುವುದು ಮತ್ತೊಂದು ಹೆಜ್ಜೆಯಾಗಬಹುದು. ಆದರೆ ಇದೆಲ್ಲದರ ನಡುವೆ ಅತ್ಯಂತ ಮುಖ್ಯವಾದದ್ದೊಂದು ಈಗಾಗಲೇ ನಾಶವಾಗಿ ಹೋಗಿದೆ; ಸಾಂವಿಧಾನಿಕ ಸಂಸ್ಥೆಗಳನ್ನು ಮತ್ತು ಅಲ್ಲಿ ಪ್ರಮುಖ ಸ್ಥಾನದಲ್ಲಿ ಕುಳಿತಿರುವ ಕೆಲವೇ ಹಿರಿಯ ಅಧಿಕಾರಿಗಳನ್ನು ನಂಬಬಹುದು ಎಂದು ಜನಸಾಮಾನ್ಯರಿಗಿದ್ದ ವಿಶ್ವಾಸವೇ ಕಮರಿ ಹೋಗಿದೆ.

ಪೊಲೀಸ್ ಇಲಾಖೆ ಸುಧಾರಣೆಗೆ 3 ಸಮಿತಿ; ಬದಲಾವಣೆ ಅಗತ್ಯವೇ?

ಪೊಲೀಸ್ ಇಲಾಖೆಯ ಕಾರ್ಯವೈಖರಿಯಲ್ಲಿ ಸುಧಾರಣೆ, ಡಿಜಿಟಲ್ ಟಚ್ ಹಾಗೂ ನೇಮಕಾತಿ ವ್ಯವಸ್ಥೆಯ ಪುನರ್‌ರಚನೆಗೆ ರಾಜ್ಯ ಸರ್ಕಾರ ಉನ್ನತ ಮಟ್ಟದ 3 ತಜ್ಞರ ಸಮಿತಿಗಳನ್ನು ರಚಿಸಿದೆ. ಆದರೆ, ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರು ಎದುರಿಸುವ ಸಮಸ್ಯೆಗಳಿಂದ ಹಿಡಿದು ರಾಜಕೀಯ ಹಸ್ತಕ್ಷೇಪ, ಭ್ರಷ್ಟಾಚಾರ, ಪೊಲೀಸ್-ಪಬ್ಲಿಕ್ ಸಂಬಂಧ, ಅಧಿಕಾರಿಗಳ ಸ್ವಾಯತ್ತತೆಯವರೆಗೆ ಇರುವ ಪ್ರಸ್ತುತ ಸವಾಲುಗಳಿಗೆ ಕೇವಲ ಸಮಿತಿಗಳ ರಚನೆಯಿಂದ ಪರಿಹಾರ ಸಾಧ್ಯವೇ? ಅಸಲಿಗೆ ಸರ್ಕಾರ ಪೊಲೀಸ್ ಸುಧಾರಣೆಯ ಅಗತ್ಯತೆಗೆ ಒತ್ತು ಕೊಡುತ್ತಿರುವುದೇಕೆ?

ಪೊಲೀಸ್ ಠಾಣೆ ಎಂದರೆ ಸಾರ್ವಜನಿಕರಿಗೆ ನ್ಯಾಯ ಸಿಗುವ ಭರವಸೆಯ ಮೊದಲ ಹಂತ. ಅಪರಾಧ ನಡೆದಾಗ ದೂರು ದಾಖಲಿಸುವುದರಿಂದ ಹಿಡಿದು ತನಿಖೆ, ಆರೋಪಿಗಳ ಪತ್ತೆ ಮತ್ತು ನ್ಯಾಯಾಲಯದಲ್ಲಿ ಸಾಕ್ಷ್ಯ ಒದಗಿಸುವವರೆಗೆ ಪೊಲೀಸ್ ಇಲಾಖೆಯ ಜವಾಬ್ದಾರಿ ಅತ್ಯಂತ ಮಹತ್ವದ್ದು. ಆದರೆ, ಅಂತಹ ಠಾಣೆಯ ಮೆಟ್ಟಿಲೇರುವ ಸಾಮಾನ್ಯ ವ್ಯಕ್ತಿಗೆ ಅಧಿಕಾರಿಯನ್ನು ಭೇಟಿಯಾಗುವುದೇ ಸವಾಲಾದರೆ, ದೂರು ದಾಖಲಿಸುವುದೇ ದುಸ್ತರವಾದರೆ. ತನಿಖಾ ಪ್ರಕ್ರಿಯೆಯ ನಿಷ್ಪಕ್ಷಪಾತತೆಯ ಬಗ್ಗೆಯೇ ಸಾರ್ವಜನಿಕ ವಲಯದಲ್ಲಿ ಗಂಭೀರ ಅನುಮಾನಗಳು ಮೂಡಿದರೆ, ಇಡೀ ಆಡಳಿತ ವ್ಯವಸ್ಥೆಯ ನೈತಿಕತೆ ಹಾಗೂ ಕಾರ್ಯವೈಖರಿಯ ಕುರಿತು ಪ್ರಶ್ನೆಗಳು ಏಳುವುದು ಸಹಜ.

ಪೊಲೀಸ್ ಇಲಾಖೆಯಲ್ಲಿ ಬೇರೂರಿರುವ ಇಂತಹ ದುಸ್ಥಿತಿ ಕೇವಲ ಕೆಲವೇ ಅಧಿಕಾರಿಗಳ ವೈಯಕ್ತಿಕ ಲೋಪದೋಷಗಳಿಗೆ ಸೀಮಿತಗೊಂಡಿಲ್ಲ. ಅದರ ಆಳ ಬೇರುಗಳು ದೋಷಪೂರಿತ ಆಡಳಿತಾತ್ಮಕ ರಚನೆ, ವೈಜ್ಞಾನಿಕವಲ್ಲದ ಸಿಬ್ಬಂದಿ ನಿರ್ವಹಣೆ, ಆರ್ಥಿಕ ಸಂಪನ್ಮೂಲಗಳ ಹಂಚಿಕೆ, ಮಿತಿಮೀರಿದ ರಾಜಕೀಯ ಪ್ರಭಾವ ಮತ್ತು ಇಲಾಖೆಯನ್ನು ತುಳಿದು ಆಳುವ ಅದೇ ಹಳೆಯ ದಬ್ಬಾಳಿಕೆಯ ಕಾರ್ಯಸಂಸ್ಕೃತಿಯಲ್ಲಿವೆ. ಹಾಗಾಗಿ ನಿಜವಾದ ಅರ್ಥದಲ್ಲಿ ಪೊಲೀಸ್ ಸುಧಾರಣೆ ಎಂದರೆ ಗಸ್ತು ತಿರುಗಲು ಹೊಸ ಗಸ್ತು ವಾಹನಗಳ ಖರೀದಿಯಲ್ಲ, ಠಾಣೆಗಳಿಗೆ ಆಧುನಿಕ ಉಪಕರಣಗಳನ್ನು ತಂದು ಸುರಿಯುವುದಲ್ಲ, ತಾಂತ್ರಿಕತೆ ಅಳವಡಿಕೊಳ್ಳುವುದೂ ಅಲ್ಲ. ಅದು ಸಾರ್ವಜನಿಕರಿಗೆ ಒದಗಿಸುವ ಸೇವೆಯ ಗುಣಮಟ್ಟವನ್ನು ಮೂಲದಿಂದ ಬದಲಿಸುವುದರಿಂದ ಹಿಡಿದು, ಇಲಾಖೆಯ ಆಂತರಿಕ ವ್ಯವಸ್ಥೆಯ ರಕ್ತನಾಳಗಳನ್ನ ಶುದ್ಧೀಕರಿಸುವ ಸಮಗ್ರ ಕಾಯಕಲ್ಪದ ಪ್ರಕ್ರಿಯೆಯಾಗಿದೆ. ಈಗ ಇದೇ ಉದ್ದೇಶದಿಂದ ಗೃಹಸಚಿವ ಪ್ರಿಯಾಂಕ್ ಖರ್ಗೆ ಮುಂದಡಿ ಇಟ್ಟಿದ್ದಾರೆ.

ಕರ್ನಾಟಕದಲ್ಲಿ ಪೊಲೀಸ್ ಇಲಾಖೆಯ ಕಾರ್ಯವೈಖರಿಯನ್ನು ಸುಧಾರಿಸುವ ಉದ್ದೇಶದಿಂದ ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಸಾರ್ವಜನಿಕ ಸೇವೆಗಳ ಸುಧಾರಣಾ ಸಮಿತಿ, ಪೊಲೀಸ್ ಆಧುನೀಕರಣ ಸಮಿತಿ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣಾ ಸಮಿತಿ ಎಂಬ ಮೂರು ತಜ್ಞರ ಸಮಿತಿಗಳ ರಚನೆಯನ್ನು ಘೋಷಿಸಿದ್ದಾರೆ. ಸಾರ್ವಜನಿಕರಿಗೆ ಒದಗಿಸುವ ಪೊಲೀಸ್ ಸೇವೆಗಳ ಸುಧಾರಣೆ, ಇಲಾಖೆಯ ಆಧುನೀಕರಣ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣೆಯ ಸುತ್ತ ಈ ಸಮಿತಿಗಳು ಕೆಲಸ ಮಾಡುತ್ತವೆ. ಮೂರು ಸಮಿತಿಗಳಿಗೂ ಎರಡು ತಿಂಗಳ ಅವಧಿಯಲ್ಲಿ ಶಿಫಾರಸುಗಳ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

ನಿವೃತ್ತ ಡಿಜಿಪಿ ಆರ್.ಕೆ. ದತ್ತ ಅವರ ನೇತೃತ್ವದ ಸಾರ್ವಜನಿಕ ಸೇವೆಗಳ ಸುಧಾರಣಾ ಸಮಿತಿಯು ಎಫ್‌ಐಆರ್ ದಾಖಲಾತಿ, ದೂರು ಸ್ವೀಕಾರ, ತುರ್ತು ಸೇವೆಗಳು, ಕಳೆದುಹೋದ ವಸ್ತುಗಳ ವರದಿ, ಸೈಬರ್ ಅಪರಾಧಗಳ ದೂರುಗಳು, ಅನುಮತಿಗಳು ಮತ್ತು ಪ್ರಮಾಣಪತ್ರಗಳು ಸೇರಿದಂತೆ ಸಾರ್ವಜನಿಕರಿಗೆ ಲಭ್ಯವಿರುವ ಸೇವೆಗಳ ಗುಣಮಟ್ಟವನ್ನು ಪರಿಶೀಲಿಸಲಿದೆ. ಸೇವೆಗಳು ತ್ವರಿತವಾಗಿ, ಪಾರದರ್ಶಕವಾಗಿ ಮತ್ತು ಜನಸ್ನೇಹಿಯಾಗಿ ದೊರೆಯುವಂತೆ ಮಾಡುವುದರ ಜತೆಗೆ, ಪೊಲೀಸ್ ಠಾಣೆಗಳ ಕಾರ್ಯವೈಖರಿ, ಸಮುದಾಯ ಪೊಲೀಸ್ ವ್ಯವಸ್ಥೆ, ಸಿಬ್ಬಂದಿ ತರಬೇತಿ ಮತ್ತು ಸೇವೆಗಳ ಗುಣಮಟ್ಟ ಅಳೆಯುವ ಮಾನದಂಡಗಳ ಬಗ್ಗೆಯೂ ಶಿಫಾರಸು ಮಾಡಲಿದೆ. ನಾಗರಿಕರ ಹಕ್ಕುಗಳು ಮತ್ತು ಸೇವೆಗಳ ಕಾಲಮಿತಿಯನ್ನು ಸ್ಪಷ್ಟಪಡಿಸುವ ಸಿಟಿಜನ್ ಚಾರ್ಟರ್ ರೂಪಿಸುವ ಸಾಧ್ಯತೆಯನ್ನೂ ಪರಿಶೀಲಿಸಲಿದೆ.

ನಿವೃತ್ತ ಡಿಜಿಪಿ ಎಂ.ಎನ್. ರೆಡ್ಡಿ ಅವರ ನೇತೃತ್ವದ ಪೊಲೀಸ್ ಆಧುನೀಕರಣ ಸಮಿತಿಯು ಪೊಲೀಸ್ ಇಲಾಖೆಯ ಮೂಲಸೌಕರ್ಯ ಮತ್ತು ತಾಂತ್ರಿಕ ಸಾಮರ್ಥ್ಯವನ್ನು ಪರಿಶೀಲಿಸಲಿದೆ. ತುರ್ತು ಪ್ರತಿಕ್ರಿಯೆ ವ್ಯವಸ್ಥೆ, ನಿಯಂತ್ರಣ ಕೊಠಡಿಗಳು, 112 ಸಹಾಯವಾಣಿ, ವಿಧಿವಿಜ್ಞಾನ ಪ್ರಯೋಗಾಲಯಗಳು, ವಾಹನಗಳು, ಸಂವಹನ ವ್ಯವಸ್ಥೆ, ಸೈಬರ್ ಅಪರಾಧ ನಿಭಾಯಿಸುವ ಸಾಮರ್ಥ್ಯ, ಕೃತಕ ಬುದ್ಧಿಮತ್ತೆ (ಎಐ) ಮತ್ತು ಡಿಜಿಟಲೀಕರಣದ ಬಳಕೆ ಇದರ ಪರಿಶೀಲನೆಯ ವ್ಯಾಪ್ತಿಯಲ್ಲಿವೆ. ಪೊಲೀಸ್ ತರಬೇತಿ, ವಸತಿ ಮತ್ತು ಸಿಬ್ಬಂದಿ ಕಲ್ಯಾಣದ ಬಗ್ಗೆಯೂ ಪರಿಶೀಲನೆ ನಡೆಸಿ, ತಕ್ಷಣದ ಅಗತ್ಯಗಳು ಹಾಗೂ ದೀರ್ಘಾವಧಿಯ ಯೋಜನೆಗಳನ್ನು ಒಳಗೊಂಡ ಆಧುನೀಕರಣದ ಕಾರ್ಯಯೋಜನೆ ರೂಪಿಸುವುದು ಈ ಸಮಿತಿಯ ಉದ್ದೇಶವಾಗಿದೆ.

ನಿವೃತ್ತ ಡಿಜಿಪಿ ಕಮಲ್ ಪಂತ್ ಅವರ ನೇತೃತ್ವದ ವೃಂದ ಮತ್ತು ನೇಮಕಾತಿ ನಿಯಮಗಳ ಪರಿಷ್ಕರಣಾ ಸಮಿತಿಯು ಪೊಲೀಸ್ ಇಲಾಖೆಯ ಹುದ್ದೆಗಳ ಸಂಖ್ಯೆ, ವೃಂದ ರಚನೆ, ನೇಮಕಾತಿ ನಿಯಮಗಳು ಮತ್ತು ಸಿಬ್ಬಂದಿಯ ಕಾರ್ಯಭಾರವನ್ನು ಪರಿಶೀಲಿಸಲಿದೆ. ನೇರ ನೇಮಕಾತಿ ಮತ್ತು ಬಡ್ತಿಯ ಅನುಪಾತ, ಹುದ್ದೆಗಳ ಸೃಷ್ಟಿ ಮತ್ತು ಮರು ವರ್ಗೀಕರಣ, ತರಬೇತಿ, ಬಡ್ತಿ ಅವಕಾಶಗಳು ಹಾಗೂ ವೃತ್ತಿಪರ ಬೆಳವಣಿಗೆಗೆ ಸಂಬಂಧಿಸಿದ ಶಿಫಾರಸುಗಳನ್ನು ರೂಪಿಸಲಿದೆ. ಪ್ರಸ್ತುತ ಮತ್ತು ಭವಿಷ್ಯದ ಅಗತ್ಯಗಳಿಗೆ ಅನುಗುಣವಾಗಿ ಮಾನವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಈ ಸಮಿತಿಯ ಗುರಿಯಾಗಿದೆ.

ಹಾಗಾದರೆ ಸುಧಾರಣೆ ಅಗತ್ಯವಿರುವುದೇಕೆ?

ಹಿರಿಯ ಐಪಿಎಸ್ ಅಧಿಕಾರಿಯೊಬ್ಬರು ಹೇಳುವಂತೆ, ಸಮಸ್ಯೆಯ ಗಂಟು ಅನಾವರಣಗೊಳ್ಳುವುದೇ ಸಾರ್ವಜನಿಕನೊಬ್ಬ ತನ್ನ ಅಳಲು ತೋಡಿಕೊಳ್ಳಲು ಪೊಲೀಸ್ ಠಾಣೆಯ ಮೆಟ್ಟಿಲೇರಿದಾಗ. ಅಲ್ಲಿ ಕುಳಿತಿರುವ ಸಿಬ್ಬಂದಿ ದಾಟಿ ಒಬ್ಬ ಇನ್ಸ್‌ಪೆಕ್ಟರನ್ನು ನೇರವಾಗಿ ಭೇಟಿಯಾಗುವುದೇ ದೊಡ್ಡ ಸಾಹಸದಂತೆ ಭಾಸವಾಗುತ್ತದೆ. ಅಪರಾಧ ನಡೆದ ತಕ್ಷಣ ಎಫ್‌ಐಆರ್ ದಾಖಲಾಗಬೇಕು ಎನ್ನುತ್ತದೆ ಕಾನೂನು. ಆದರೆ ಇಂದು ಒಂದು ಸಣ್ಣ ಎಫ್‌ಐಆರ್ ದಾಖಲಿಸುವುದೇ ದುಸ್ತರ. ಇನ್ನು ತನಿಖೆಯ ಗುಣಮಟ್ಟವಂತೂ ಸಂಪೂರ್ಣ ಅನುಮಾನದ ನೆರಳಿನಲ್ಲೇ ಸಾಗುತ್ತದೆ. ಎಲ್ಲಿ ಕಾಂಚಾಣ ಹರಿಯುತ್ತದೆಯೋ, ತನಿಖೆಯ ದಿಕ್ಕು ಮತ್ತು ನಿಲುವು ಸಹ ಸಹಜವಾಗಿಯೇ ಆ ದಿಕ್ಕಿಗೇ ವಾಲುತ್ತದೆ. ಇದೇ ವ್ಯವಸ್ಥೆಯ ರಕ್ತ ಹೀರುತ್ತಿರುವ ಭ್ರಷ್ಟಾಚಾರ.

ಈ ವ್ಯವಸ್ಥಿತ ರೋಗಗ್ರಸ್ತ ಸ್ಥಿತಿಯ ಮೂಲವನ್ನು ಹುಡುಕುತ್ತಾ ಹೋದರೆ ಮೊದಲು ಕಣ್ಣಿಗೆ ಬೀಳುವುದು ನೇಮಕಾತಿ ಹಂತ. ಕಾಲೇಜು ದಿನಗಳಲ್ಲಿ ಖಾಕಿ ತೊಟ್ಟು ಸಮಾಜ ಸೇವೆ ಮಾಡಬೇಕು, ಇಲ್ಲವೇ ದೇಶ ಸೇವೆ ಮಾಡಬೇಕು ಎಂಬ ಆದರ್ಶ ಕನಸು ಹೊತ್ತು ಪೊಲೀಸ್ ಹುದ್ದೆಯತ್ತ ಹೆಜ್ಜೆ ಇಡುವ ಯುವಕನೊಬ್ಬನ ಹಾದಿ ಸುಲಭವಾಗಿರಲ್ಲ. ಗೌರವಾನ್ವಿತ ಸರ್ಕಾರಿ ಉದ್ಯೋಗಕ್ಕಾಗಿಯೋ, ಬದುಕಿನ ಭದ್ರತೆಗಾಗಿಯೋ ಅಥವಾ ಸಮಾಜದಲ್ಲಿ ತಾನೊಬ್ಬ ನಾಯಕನಾಗಬೇಕು ಎಂಬ ಕನಸಿನೊಂದಿಗೆ ಈ ವೃತ್ತಿಗೆ ಕಾಲಿಡುತ್ತಾರೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR